
ನವೆಂಬರ್ : 2001

ತಿಂಗಳ ಪತ್ರಿಕೆ



ಮಹಿಳಾ ಹಿಂಸೆಯ ಮೇಲಿನ ಕಲ್ಪನೆಗಳು

✡

ಕಳೆದುಹೋದ ಪೀಳಿಗೆಯ ಒಡಲದನಿ

✡

ಅಮ್ಮನಿಗೆ

✡

ನಾಗಾ ಮಹಿಳೆಯರು ಮತ್ತು ಶಾಂತಿ ಪ್ರಕ್ರಿಯೆ



ಮಾನಸ

ತಿಂಗಳ ಪತ್ರಿಕೆ

ಸಂಪುಟ : 20 ಸಂಚಿಕೆ : 11

ನವೆಂಬರ್ : 2001

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಇ-ಮೈಲ್ : manasapathrike@yahoo.co.in

ಸೂಚನೆ : ಬಿಡಿ ಪ್ರತಿ **5-00** ರೂ.

ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಭಾರತದಲ್ಲಿ ಮಹಿಳಾ ಸಂವೇದನೆಯ ಇಂಗಿತವನ್ನು ವಿವಿಧ ರಾಜ್ಯಗಳ ಇತಿಹಾಸದ ಪುಟಗಳಲ್ಲಿ ಕಾಣಬಹುದಾದರೂ, ಒಂದು ಸಿದ್ಧಾಂತದ ನೆಲೆಯಿಂದ ಮೂಡಿಬಂದ ಮಹಿಳಾ ಚಳುವಳಿಯನ್ನು 80ರ ದಶಕದಿಂದ ಕಾಣಬಹುದು. ಈ ಚಳುವಳಿಯು ಭಾರತದಲ್ಲಿ ಪ್ರಾರಂಭವಾದದ್ದು ನೂರು ವರ್ಷಗಳಿಂದ ಬದಲಾಗದೇ ನಿಂತ ನೀರಿನಂತಿದ್ದು, ಮಹಿಳಾ ವಿರೋಧಿಯಾಗಿದ್ದ ಅತ್ಯಾಚಾರದ ಕಾನೂನಿನ ಬದಲಾವಣೆಗೆ ಒತ್ತಾಯಿಸುವುದರ ಮೂಲಕ. ಮೇಲ್ನೋಟಕ್ಕೆ ಮಹಿಳೆಯರ ಹಿತಾಸಕ್ತಿಯನ್ನು ರಕ್ಷಿಸುವಂತೆ ಕಾಣುತ್ತಿದ್ದ ಕಾನೂನಿನ ಮಿತಿಗಳನ್ನು, ಅದರ ಆಳದಲ್ಲಿದ್ದ ಸ್ತ್ರೀ ವಿರೋಧಿ ಅಂಶಗಳನ್ನು ಮಹಿಳಾ ಚಳುವಳಿ ಪ್ರಶ್ನಿಸುವುದರ ಮೂಲಕ ಮಹಿಳಾ ಶೋಷಣೆಯ ಹಿಂದಿರುವ ಪಿತೃಪ್ರಧಾನ ವ್ಯವಸ್ಥೆಯನ್ನು ಗುರುತಿಸಿತು. ಇದು ಮಹಿಳೆಯರ ಲೈಂಗಿಕತೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಒಂದು ಚರಿತ್ರಾರ್ಹವಾದ ಮೈಲಿಗಲ್ಲನ್ನು ನೆಟ್ಟಿತು.

ಅಂದಿನಿಂದ ಇಂದಿನವರೆಗೆ ಮಹಿಳಾ ಲೈಂಗಿಕತೆಯನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸಿದ ಪಿತೃಪ್ರಧಾನತೆ ಹಾಗೂ ಅದರೊಡನೆ ತಳುಕು ಹಾಕಿಕೊಂಡಿರುವ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಜಾತಿ ವ್ಯವಸ್ಥೆಗಳು – ಹೀಗೆ ಸಂಕೀರ್ಣ ಸ್ವರೂಪದಲ್ಲಿ ಕಾರ್ಯ ಪ್ರವೃತ್ತವಾಗಿವೆ ಎಂಬುದನ್ನು ಚಳುವಳಿ ವಿಶ್ಲೇಷಿಸುತ್ತಾ ಬಂದಿದೆ. ಮಹಿಳೆಯರ ಲೈಂಗಿಕತೆಯನ್ನು ಕುರಿತು ಸ್ತ್ರೀವಿರೋಧಿಯಾದ ಹಲವಾರು ರೀತಿಯ ತಪ್ಪು ಪರಿಕಲ್ಪನೆಯನ್ನು ಕಾಣಬಹುದು. ಈ ಪರಿಕಲ್ಪನೆಗಳು ವಿವಿಧ ಸ್ತರಗಳಲ್ಲಿ ಕೆಲಸ ಮಾಡುತ್ತವೆ. ಇಂತಹ ಪರಿಕಲ್ಪನೆಗಳನ್ನು ಪಿತೃಪ್ರಧಾನ ಸಮಾಜ ಎಷ್ಟು ಜಾಣ್ಮೆಯಿಂದ ಜಾರಿಗೆ ತರುತ್ತಿದೆಯೆಂದರೆ ಸ್ತ್ರೀವಿರೋಧಿಯಾಗಿರುವ ಮೌಲ್ಯಗಳ ಪ್ರತಿಪಾದಕರು ಕೂಡಾ ಸ್ತ್ರೀಯರೇ ಆಗಿರುವಂತೆ ಮಾಡಿದೆ. ಸ್ತ್ರೀಯರ ಮೇಲೆ ನಡೆಯುವ ಲೈಂಗಿಕ ಹಿಂಸೆಯ ವಿವರಗಳನ್ನು ಗ್ರಹಿಸಿದಾಗಲೇ ಅದರ ಸ್ವರೂಪವನ್ನು ಖಚಿತ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಸಂಚಿಕೆಯಲ್ಲಿ ಇಂತಹ ಪ್ರಯತ್ನವನ್ನು ಮಾಡಲಾಗಿದೆ.

-ಸಂಪಾದಕ ಮಂಡಳಿ

ಪಿತೃಪ್ರಧಾನ ಭೀತಿಗಳು ಹಾಗೂ ಸ್ತ್ರೀ ದ್ವೇಷಿಗಳ ದಾಳಿಗಳು
ಮಹಿಳಾ ಹಿಂಸೆಯ ಮೇಲಿನ ಕಲ್ಪನೆಗಳು

ಮೂಲ : ಫ್ಯಾಕ್ಟ್ಸ್ ಅಂಡ್ ಮಿಥ್ಸ್
ಕನ್ನಡಕ್ಕೆ : ಸವಿತ ಎ.

ಕೌಟುಂಬಿಕ ಹಿಂಸೆ, ಲೈಂಗಿಕ ಕಿರುಕುಳ, ಲೈಂಗಿಕ ಅತ್ಯಾಚಾರಗಳಂತಹ ಹಲವಾರು ಹಿಂಸೆಯನ್ನು ಮಹಿಳೆಯರ ಮೇಲೆ ಎಸಗಲಾಗುತ್ತಿದೆ. ಮಹಿಳಾ ಸಂಘಟನೆಗಳು, ದೇಶದಾದ್ಯಂತ ಮತ್ತು ಅಂತರ್ ರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಹಿಳೆಯ ಮೇಲೆ ನಡೆಯುವ ಹಿಂಸೆಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತಿವೆ. ತೀರಾ ಹತ್ತಿರ ಸಂಬಂಧಿಕರಿಂದ ನಡೆಯುವ ಅತ್ಯಾಚಾರ ಮೊದಲುಗೊಂಡು, ಲೈಂಗಿಕ ಅತ್ಯಾಚಾರದಂತಹ ಹಿಂಸೆಯ ಅನೇಕ ವಿಕೃತ ರೂಪಗಳು ಬಯಲಿಗೆ ಬಂದಿವೆ. ಇವು ಲೈಂಗಿಕ ಕಿರುಕುಳದಿಂದ ಹಿಡಿದು, ಸೈಬರ್ ಜಾಲದಲ್ಲಿ ನಡೆಯುವ ಲೈಂಗಿಕ ದೌರ್ಜನ್ಯ, ಮಕ್ಕಳ ಮೇಲಿನ ಲೈಂಗಿಕ ಹಿಂಸೆಯಂತವುಗಳೂ ಆಗಿವೆ. ಸಾಮಾಜಿಕ ಪಿಡುಗು ಎಂದು ಮೊದಲು ಪರಿಗಣಿಸಲ್ಪಟ್ಟ ವೇಶ್ಯಾವಾಟಿಕೆಯು ಮಹಿಳೆಯ ಮೇಲೆ ನಡೆಯುವ ಹಿಂಸೆಯ ಮತ್ತೊಂದು ರೂಪ. ವೇಶ್ಯಾವಾಟಿಕೆಯು ಮಹಿಳೆಯನ್ನು ಲೈಂಗಿಕ ಮಾರಾಟದ ಸರಕಾಗಿ ಪರಿಗಣಿಸಿರುವುದೂ ಅಲ್ಲದೇ ಘರ್ಷಣೆ ಬೇರೆ ಬೇರೆ ಆಯಾಮಗಳನ್ನು ಒಳಗೊಂಡಿದೆ. ಅಭಿವೃದ್ಧಿಯ ಹೆಸರಿನಲ್ಲಿ ಹುಟ್ಟಿಕೊಂಡಿರುವ ನೂತನ ಕಾರ್ಯನೀತಿಗಳಾದ N.E.P., SAP ಮತ್ತು ಇಂದಿನ ಆರ್ಥಿಕ ಜಾಗತೀಕರಣವು ಮಹಿಳೆಯರ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಿರುವುದು ತೋರುತ್ತದೆ. 'ಮುಕ್ತ ಮಾರುಕಟ್ಟೆ' ಮತ್ತು ಉದಾರೀಕರಣಗಳಂತಹ ಕಾರ್ಯನೀತಿಗಳು ಜಾರಿಗೆ ಬಂದಿರುವುದರಿಂಥ ಬಡಮಹಿಳೆಯರ ಜೀವನೋಪಾಯಕ್ಕೆ ಕುತ್ತು ಉಂಟಾಗುತ್ತಿದೆ. ಕೌಟುಂಬಿಕ ಜವಾಬ್ದಾರಿಗಳನ್ನು ನೆರವೇರಿಸುವುದು ಮೊದಲಿಗಿಂತ ಹೆಚ್ಚು ಕಠಿಣವಾಗುತ್ತಿದೆ. ಇಂತಹ ಪರಿಸ್ಥಿತಿಯ ಹಿನ್ನೆಲೆಯಲ್ಲಿ "ದ ಇನ್‌ಫಾರ್‌ಮಲ್ ವರ್ಕಿಂಗ್ ಗ್ರೂಪ್ ಆನ್ ಜೆಂಡರ್ ಅಂಡ್ ಟ್ರೇಡ್" ಎಂಬ ಸಂಸ್ಥೆ ವಿಶ್ವ ವ್ಯಾಪಾರ ಸಂಸ್ಥೆಯ ಯೋಜನೆಗಳನ್ನು ಕುರಿತು ಹೀಗೆ ಹೇಳಿದೆ. ಮಾರುಕಟ್ಟೆ ಮುಕ್ತವಾಗಬೇಕು ಎಂದು ತನ್ನ ಯೋಜನೆಯ ಮೂಲಕ ಹೇಳಿದ ವಿಶ್ವ ವ್ಯಾಪಾರ ಸಂಸ್ಥೆ ಮಹಿಳೆಯರ ಆರ್ಥಿಕ ಮಟ್ಟವನ್ನು ಗಣನೆಗೆ ತೆಗೆದುಕೊಂಡಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಸ್ಪರ್ಧೆ ಉಳಿಸಲು ಬಂಡವಾಳ ಹೂಡಿಕೆಯನ್ನು ದುಪ್ಪಟ್ಟುಗೊಳಿಸುವುದರ ಮೂಲಕ ಮಹಿಳೆಯರ ಆರ್ಥಿಕ ಮಟ್ಟದ ಸ್ಥಿತಿಯಲ್ಲಿ ತೀವ್ರ ಹೊಂದಾಣಿಕೆ ಮಾಡಿಕೊಂಡಿದೆ. ಇದರಿಂದ ವಿಶ್ವ ಮಾರುಕಟ್ಟೆಯಲ್ಲಿ ಮಹಿಳಾ ಭಾಗವಹಿಸುವಿಕೆ ಕುಗ್ಗುತ್ತಾ ಬಂದಿದೆ.

ಮಹಿಳೆಯರ ಮೇಲೆ ಎಸಗಲಾಗಿರುವ ಹಿಂಸೆ ಜಗತ್ತಿನಲ್ಲಿ ಗುರುತಿಸಲ್ಪಡುತ್ತಿರುವ ಹಿನ್ನೆಲೆಯಲ್ಲಿ ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ ಕೂಡಾ ಇದನ್ನು ಅಧಿಕೃತವಾಗಿ ಗುರುತಿಸಿದೆ. ವಿಶಾಕ್ ಹಾಗೂ ರಾಜಸ್ಥಾನ ಸರ್ಕಾರದ ನಡುವೆ ಇದ್ದ ಮೊಕದ್ದಮೆಗೆ ಸರ್ವೋಚ್ಛ ನ್ಯಾಯಾಲಯವು ಇತ್ತ ತೀರ್ಪು ಪ್ರಮುಖವಾದದ್ದು. ಮಹಿಳೆಯ ಮೇಲೆ ಜರುಗುವ ಲೈಂಗಿಕ ಕಿರುಕುಳ ಮಾನವೀಯ ಹಕ್ಕುಗಳ ಉಲ್ಲಂಘನೆ ಎಂದು ಮೊಟ್ಟ ಮೊದಲ ಬಾರಿಗೆ ಸರ್ವೋಚ್ಛ ನ್ಯಾಯಾಲಯ ಮನಗಂಡಿತ್ತು. ಈ ವಿಷಯದಲ್ಲಿ ವಿಶ್ವ ಒಡಂಬಡಿಕೆಯು ಅತಿ ಪ್ರಮುಖವಾಗಿದೆ. ಯಾಕೆಂದರೆ ಪ್ರತಿ ದೇಶಗಳ ಕಾನೂನುಗಳಲ್ಲಿ ಕೌಟುಂಬಿಕ ಕಾನೂನಿನ ಅಭಾವ ಇರುವುದರಿಂದ, ದುಡಿಯುವ ಕ್ಷೇತ್ರಗಳಲ್ಲಿ ಮಹಿಳೆಯ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ವಿಶ್ವ ಒಡಂಬಡಿಕೆಗಳು ಸಹಕಾರಿಯಾಗಿವೆ ಎಂಬ ಹೇಳಿಕೆಯನ್ನು ಸರ್ವೋಚ್ಛ ನ್ಯಾಯಾಲಯ ನೀಡಿದೆ. ಆಗಸ್ಟ್ 14, 1997ರಲ್ಲಿ ಸರ್ವೋಚ್ಛ ನ್ಯಾಯಾಲಯವು ಲೈಂಗಿಕ ಕಿರುಕುಳವನ್ನು ತಡೆಯಲು ಕೆಲವು ಸೂಕ್ತ ಕ್ರಮಗಳನ್ನು ಉಲ್ಲೇಖಿಸಿದೆ. ಯಾವುದೇ ವಿಶ್ವ ಒಡಂಬಡಿಕೆಯು ಸಂವಿಧಾನದ ಸೂಕ್ತ-ಗುರಿಗಳಿಗೆ ಹೊಂದಿಕೊಳ್ಳುವಂತಿರುವಾಗ ಆ ಒಡಂಬಡಿಕೆಯನ್ನು ಕಾನೂನುಗಳಲ್ಲಿ ಅಳವಡಿಸಿಕೊಂಡು ಅದರ ಅರ್ಥ ಮತ್ತು ಸಾರಾಂಶದ ತಿರುಳನ್ನು ಅರ್ಥಪೂರ್ಣವಾಗಿರುವಂತೆ ವಿಸ್ತರಿಸುವುದು ಅಗತ್ಯವಾಗುತ್ತದೆ.

ಸಮಾಜದ ಅನೇಕ ವ್ಯವಸ್ಥೆಗಳಲ್ಲಿ ಮೊಳಕೆಯೊಡೆದು ನಿರಂತರವಾಗಿ ಮುಂದುವರೆಯುತ್ತಿರುವ ಮಹಿಳೆಯರ ಹಿಂಸೆಯ ವಿವಿಧ ರೂಪಗಳನ್ನು ಗಮನಿಸಿದಾಗ ಹಿಂಸೆಯ ದೃಷ್ಟಿಕೋನ ಸ್ಪಷ್ಟವಾಗುತ್ತಿದೆ. ಜೊತೆಗೆ ಹಿಂಸೆಗೆ ಒಳಪಟ್ಟಿರುವ ಮಹಿಳಾ ವರ್ಗೀಕರಣ ಕೂಡಾ ಒಂದು ಸಂಕೀರ್ಣ ಅಂಶವಾಗಿದೆ. ಎಲ್ಲಾ ವಯಸ್ಸಿನ ಮಹಿಳೆಯರೂ ಈ ಹಿಂಸೆಗೆ ಗುರಿಯಾಗಿದ್ದಾರೆ. ಆಮ್‌ನಿಯೋ ಸಿಂಥೆಸಿಸ್ ಗರ್ಭಾಶಯದಲ್ಲಿರುವಾಗಲೇ ಹೆಣ್ಣು ಶಿಶುವನ್ನು ಹತ್ಯೆಗೈಯ್ಯುತ್ತದೆ. ಹೆಣ್ಣು ಶಿಶುವಿನ ಮರಣ ಸಂಖ್ಯೆ

ದಶಕ, ದಶಕಗಳಿಂದಲೂ ಹೆಚ್ಚುತ್ತಿರುವುದು ಜನಸಂಖ್ಯಾ ದಾಖಲಾತಿಗಳ ವರದಿಗಳಿಂದ ತಿಳಿದುಬರುತ್ತಿದೆ.

ಮಹಿಳೆಯನ್ನು ನಾಲ್ಕು ಗೋಡೆಗಳ ನಡುವೆ ಬಂಧಿಸಿಟ್ಟು ಆಕೆಯ ಮೇಲೆ ಪ್ರತ್ಯೇಕ ಹಿಂಸೆಗಳನ್ನು ಎಸಗಲಾಗುತ್ತಿದೆ. ಅವರ ಬದುಕಿನ ಬಗ್ಗೆ ಅವರು ಆಯ್ಕೆ ಮಾಡುವುದನ್ನೂ ಕೂಡಾ ತಡೆಯಲಾಗುತ್ತಿದೆ. ಸಾಮಾನ್ಯವಾಗಿ ಲೈಂಗಿಕ ಕ್ರಿಯೆಗಳು ಸಂತೋಷ ಹಾಗೂ ಸಂವಹನಗಳೆರಡರ ಸಂಪನ್ಮೂಲವಾಗಿರುವುದರಿಂದ ಇದು ಒಂದು ರೀತಿಯ ಪ್ರತ್ಯೇಕ ತಂತ್ರವಾಗಿದೆ. ಬೇರೆ ಎಲ್ಲಾ ಹಿಂಸೆಗಳನ್ನು ನೋಡುವಂತೆ, ಮಹಿಳಾ ಹಿಂಸೆಯ ರೂಪಗಳನ್ನು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನಲೆಯಲ್ಲಿ

3) ಬಂಡವಾಳಶಾಹಿ ಮತ್ತು ಪಿತೃಪ್ರಧಾನ ವ್ಯವಸ್ಥೆಯ ಸಂಬಂಧಗಳು (ಸೋಷಿಲಿಸ್ಟ್ ಸ್ತ್ರೀವಾದಿಗಳು)

4) ಜಾತಿ ಮತ್ತು ವರ್ಗದ ಶೋಷಣೆ (ಮಾರ್ಕ್ಸಿಂ, ಫುಲೆ, ಅಂಬೇಡ್ಕರ್ ಸ್ತ್ರೀವಾದಿಗಳು)

ನಿರ್ದಿಷ್ಟ ಮಹಿಳಾ ಹಿಂಸೆಗಳು ಕೆಲವು ಸಾಂಸ್ಕೃತಿಕ ಆಚರಣೆಗಳಲ್ಲಿ ಒಂದಾಗಿದ್ದು, ರಾಜಕೀಯ ಮತ್ತೆ ಜಾಗತಿಕ ಗಡಿಗಳಾಚೆಯೂ ಸಾಮಾಜಿಕ ವ್ಯವಸ್ಥೆಯಲ್ಲಿ ಎಷ್ಟರಮಟ್ಟಿಗೆ ಹೊಕ್ಕಿದೆಯೆಂದರೆ. (1) ಹೊಡೆತ ತಿನ್ನುವ ಮಹಿಳೆಯರು ಹೊಡೆತಕ್ಕೆ ತಾವೇ ಕಾರಣ ಎಂದು ಭಾವಿಸುವ ಮಟ್ಟಿಗೆ; (2) ಭದ್ರವಾಗಿ ನೆಲೆಯೂರಿರುವ ಮಹಿಳಾ ಹಿಂಸೆಗಳು ಸಾಮಾಜಿಕ

ಮಲಗು ಇಲ್ಲ ತೊಲಗು

ಲೈಂಗಿಕ ಚಟುವಟಿಕೆಗಳ ನಿರಾಕರಣೆ ಮಹಿಳೆಗೆ ಯಾಕೆ ಕಷ್ಟವಾಗುತ್ತಿದೆ ಎಂಬುದಕ್ಕೆ ಹಲವಾರು ಕಾರಣಗಳಿವೆ.

-ತನ್ನ ಮತ್ತು ಮಕ್ಕಳ ಜೀವನೋಪಾಯಕ್ಕಾಗಿ ದುಡಿಯುತ್ತಿರುವ ಕೆಲಸವನ್ನು ತಾನು ಕಳೆದುಕೊಂಡು ಬಿಡಬಹುದು ಎಂಬ ಅನುಮಾನದಿಂದಾಗಿ

-ವಯಸ್ಸಾದ ಗಂಡಸರಿಗೆ ಮತ್ತು ಅವರ ಅಧಿಕಾರಕ್ಕೆ, ಆಸೆ, ಆಕಾಂಕ್ಷೆಗಳಿಗೆ ಗೌರವ ನೀಡುವುದನ್ನು ಅಭ್ಯಾಸ ಮಾಡಿಕೊಂಡಿರುವುದರಿಂದ.

-ಆ ಗಂಡಸು ಸಂಬಂಧಿಕನಾಗಿರಬಹುದು. ಒಲ್ಲೆನೆಂದಾಗ ಅಥವಾ ದೂರವಾದಾಗ ಆತನಿಗೆ ಬೇಜಾರಾಗಬಹುದು ಎಂಬ ಭಯ.

ಹಲವಾರು ದೇಶಗಳಲ್ಲಿ ಲೈಂಗಿಕ ಕಿರುಕುಳವನ್ನು 'ಮಲಗು' ಇಲ್ಲವೇ 'ತೊಲಗು' ಎಂಬ ನೀತಿಯ ಮೇಲೆ ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಯಾಕೆಂದರೆ ಕಿರುಕುಳ ನೀಡಿದ ಗಂಡಸರೊಂದಿಗೆ ಮಹಿಳೆ ಲೈಂಗಿಕ ಸಂಪರ್ಕ ಹೊಂದದಿದ್ದರೆ, ಆ ಮಹಿಳೆ ಬೈಯ್ಗುಳ ಸುರಿಮಳೆ ಪಡೆಯುತ್ತಾಳೆ. ಮತ್ತೆ ಅನೇಕ ಕಿರಿಕಿರಿಯನ್ನು ಎದುರಿಸುತ್ತಾಳೆ. ಯಾವುದೇ ಸಂದರ್ಭದಲ್ಲಾಗಲೀ ಲೈಂಗಿಕ ಕಿರುಕುಳ ನೀಡುವುದು ಮಹಾತಪ್ಪು. ಎಲ್ಲಾ ದೇಶಗಳಲ್ಲೂ ಇದು ಕಾನೂನಿಗೆ ವಿರುದ್ಧವಾಗಿದೆ.

ನೋಡಬೇಕು. ಮಹಿಳಾ ಹಿಂಸೆಯ ಬೇರುಗಳು ಪುರುಷಾಧಿಪತ್ಯ ತಾಂಡವವಾಡುತ್ತಿರುವ ಎಲ್ಲಾ ವರ್ಗ, ಜಾತಿ ಮತ್ತು ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸುಹೊಕ್ಕಿವೆ. ಮಹಿಳೆಯರು ವರ್ಣ ವ್ಯವಸ್ಥೆಯ ಹಾಗೂ ಧಾರ್ಮಿಕ ಶ್ರೇಣಿಯಲ್ಲಿ ಕಟ್ಟ ಕಡೆಯಲ್ಲಿ ಪಡೆದುಕೊಳ್ಳುವ ಅಂಚಿನಲ್ಲಿದ್ದಾರೆ. ವಿಶೇಷವಾಗಿ ದಲಿತ ಮಹಿಳೆಯರು ಇದರೊಂದಿಗೆ ಅಸ್ಪೃಶ್ಯತೆ ಎಂಬ ಅಮಾನವೀಯ ಪಿಡುಗನ್ನು ಎದುರಿಸಬೇಕಾಗಿದೆ.

ಮಹಿಳಾ ಹಿಂಸೆ ಲಿಂಗ ಅಸಮಾನತೆಯನ್ನು ಮರು ಪ್ರಚಲಿತ ಗೊಳಿಸುತ್ತಿದೆ ಎಂದು ಸ್ತ್ರೀವಾದಿ ಚರ್ಚೆಗಳು ಹಾಗೂ ದೃಷ್ಟಿಕೋನಗಳು ಬಹಿರಂಗಪಡಿಸಿವೆ. ಹಾಗೂ ಇದರ ಮೂಲದಲ್ಲಿ

1) ಶೋಷಿತ ಉತ್ಪಾದನಾ ಸಂಬಂಧಗಳು

2) ಮಹಿಳೆ ಮತ್ತು ಪುರುಷರ ನಡುವಿರುವ ಮೂಲಭೂತ ವೈರುಧ್ಯಗಳು (ರ್‍ಯಾಡಿಕಲ್ ಸ್ತ್ರೀವಾದಿಗಳು)

ಒಪ್ಪಂದ ಪಡೆದಿರುವುದರಿಂದ ಶೋಷಿತರ ಅನುಮೋದನೆ ದೊರೆಯುತ್ತದೆ. ಕಾನೂನು ಪಾಲಕರೆನಿಸುವ ಆರಕ್ಷಕರಾಗಲೀ ಅಥವಾ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವವರಾಗಲೀ ಹೆಣ್ಣಿನ ಮೇಲೆ ನಡೆಯುವ ಹಿಂಸೆಯನ್ನು ಗಂಭೀರವಾದ ಆರೋಗ್ಯ ಸಮಸ್ಯೆ ಎಂದಾಗಲೀ, ಹೆಂಗಸಿನ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದಾಗಲೀ ಭಾವಿಸದಿರುವುದು ಆಶ್ಚರ್ಯಕರವಾಗಿದೆ.

ಮಹಿಳಾ ಹಿಂಸೆಯು ಯಾವುದೇ ಚಾರಿತ್ರಿಕ ಅಪಘಾತವಲ್ಲ. ಇದು ಆಳವಾಗಿ ಬೇರೂರಿರುವ ಪಿತೃಪ್ರಧಾನತೆಯ ಹೆದರಿಕೆಯಿಂದ ಹಾಗೂ ಸ್ತ್ರೀ ದ್ವೇಷಗಳಿಂದ ಸ್ವರೂಪ ತಳೆದದ್ದೆಂಬುದು ಸ್ಪಷ್ಟವಾಗಿದೆ.

ಉದಾ: ಬಿಹಾರದ ಪಸಾರಿಯಾ ಗ್ರಾಮದಲ್ಲಿ ಆದಿವಾಸಿ ಮಹಿಳೆಯರ ಮೇಲೆ ಸಾಮೂಹಿಕ ಲೈಂಗಿಕ ಅತ್ಯಾಚಾರ ಎಸಗಿದ್ದ 14 ಜನ ಪೊಲೀಸರನ್ನು 1989ರ ಮಾರ್ಚ್ 6ರಂದು

ನ್ಯಾಯಮೂರ್ತಿ ಓ.ಪಿ. ಸಿಹ್ನಾರವರು ನಿರಪರಾಧಿಗಳೆಂದು ಬಿಡುಗಡೆ ಮಾಡಿದರು. ಈ ಆದಿವಾಸಿ ಮಹಿಳೆಯರನ್ನು ಘನತೆ, ಶಿಷ್ಟತೆ ಹಾಗೂ ಗೌರವಾನ್ವಿತ ಕುಟುಂಬಕ್ಕೆ ಸೇರಿದ ಹೆಂಗಸರಿಗೆ ಹೋಲಿಸಲಾಗುವುದಿಲ್ಲ. ಯಾಕೆಂದರೆ ಈ ಆದಿವಾಸಿ ಹೆಂಗಸರು ಕೀಳು ಕೆಲಸ ಮಾಡುತ್ತಾರಾದ್ದರಿಂದ ಇವರ ನಡತೆ ಪ್ರಶ್ನಾರ್ಹ ಎಂದು ಪೊಲೀಸ್ ಪರ ವಾದಿಸಿದ್ದ ವಕೀಲರು ನ್ಯಾಯಮೂರ್ತಿಗಳ ಮನಗೆದ್ದರು. ಈ ಆದಿವಾಸಿ ಹೆಂಗಸರಿಗೆ ಸಾವಿರ ರೂ. ಒಂದು ದೊಡ್ಡ ಮೊತ್ತವಾಗಿರುವುದರಿಂದ ಅದಕ್ಕೋಸ್ಕರ ತಪ್ಪು ಹೇಳಿಕೆ ನೀಡಿದ್ದಾರೆಂದರೆ ಆಶ್ಚರ್ಯ ಸಂಗತಿಯಲ್ಲ. ಹಾಗೂ ತಳ್ಳಿಹಾಕುವಂತಿಲ್ಲ, ಯಾಕೆಂದರೆ ಈ ಹೆಂಗಸರ ಬೆಲೆ ಕೂಡಾ ಅಷ್ಟೇ ಎಂದು ಅವರ ಮೇಲೆ ಹಿಂಸೆ ನಡೆಸಿದವರನ್ನು ನ್ಯಾಯಾಧೀಶರು ಬಿಡುಗಡೆ ಮಾಡಿದರು.

ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆಯ ಪಾಲಕರಾದ ನ್ಯಾಯಮೂರ್ತಿಗಳು ಲಿಂಗ ದೌರ್ಜನ್ಯದ ವಿಷಯವಾಗಿ ಪಕ್ಷಪಾತದ ನಿಲುವು ತೋರಿಸಿರುವುದನ್ನು ದೆಹಲಿಯ 'ಸಾಕ್ಷಿ' ಇತ್ತೀಚೆಗೆ ಪ್ರಕಟಪಡಿಸಿದೆ.

1) ಗಂಡಂದಿರು ವಿನಾಕಾರಣ ಮಹಿಳೆಯರನ್ನು ದಂಡಿಸುವುದಿಲ್ಲ ಎಂದು 74% ನ್ಯಾಯಮೂರ್ತಿಗಳು ನಂಬುತ್ತಾರೆ.

2) ಮಹಿಳೆಯರು ಅನುಭವಿಸುವ ಅನೇಕ ಹಿಂಸೆಗಳಿಗೆ ಅವರೇ ಹೊಣೆ ಹೊರತು, ಅದರ ಜವಾಬ್ದಾರಿಯನ್ನು ಪುರುಷರ ಮೇಲೆ ಹೊರಿಸುವುದು ಅಸಂಬದ್ಧವೆಂದು 64% ನ್ಯಾಯಮೂರ್ತಿಗಳು ಮನಗಂಡಿದ್ದಾರೆ.

3) ಮಹಿಳೆಯರು ಉಡುಗೆಯನ್ನು ತೊಡುವ ರೀತಿ-ನೀತಿಗಳು ಮತ್ತು ಅವಳ ನಡತೆಯ ಬಗ್ಗೆ ಮುಂಜಾಗ್ರತೆ ವಹಿಸದಿರುವುದು; ಆಕೆಯ 'ಪ್ರಚೋದಿತ' ವರ್ತನೆಯೇ ಪುರುಷರು ಆಕೆಯ ಮೇಲೆ ಹಿಂಸೆ ಎಸೆಗಲು ಕಾರಣವಾಗಿರುತ್ತದೆ ಎಂಬುದು ಅವರ ನಂಬಿಕೆ. 35% ಮಹಿಳೆಯರು ಗಂಡಂದಿರ ವಿರುದ್ಧ ಮೊಕದ್ದಮೆ ದಾಖಲು ಮಾಡಲು ಉದಾಸೀನ ತೋರುತ್ತಾರೆ, ಏಕೆಂದರೆ-

(ಎ) ಆರ್ಥಿಕ ಮುಗ್ಗಟ್ಟು ಮತ್ತು ಆ ವಿಷಯಗಳ ಬಗ್ಗೆ ಅರಿವು ಇಲ್ಲದಿರುವುದು.

(ಬಿ) 27% ಮಹಿಳೆಯರು ಕುಟುಂಬದ ಒತ್ತಡಕ್ಕೆ ಮಣಿದು ಮೊಕದ್ದಮೆ ದಾಖಲಿಸುವುದಿಲ್ಲ.

(ಸಿ) 15% ಮಹಿಳೆಯರು ಹೊಡೆತಕ್ಕೆ ಇರುವ ಕಳಂಕಕ್ಕೆ ಹೆದರುತ್ತಾರೆ.

(ಡಿ) 14% ಮಹಿಳೆಯರು ನಾಚಿಕೆ ಮತ್ತು ಅಪರಾಧೀ ಮನೋಭಾವದಿಂದ ನರಳುತ್ತಾರೆ.

(ಇ) 7% ಮಹಿಳೆಯರು ಭೀತಿಯಿಂದ ಮೊಕದ್ದಮೆ ದಾಖಲಿಸಲು ಮುಂದೆ ಬರುವುದಿಲ್ಲ.

ಹೊಡೆತಕ್ಕೆ ಸಂಬಂಧಪಟ್ಟ ಮೊಕದ್ದಮೆ ನಡೆಸುವಾಗ ನ್ಯಾಯಾಧೀಶರು ಪುರುಷ ಪಕ್ಷಪಾತ ನಿಲುವು ತಳೆಯುತ್ತಾರೆ ಎಂದು 55% ಮಹಿಳೆಯರು ಅಭಿಪ್ರಾಯಪಡುತ್ತಾರೆ. ಇಂತಹ ಮೊಕದ್ದಮೆಗೆ ಸಂಬಂಧಪಟ್ಟ ನ್ಯಾಯಾಧೀಶರ ನಿಲುವುಗಳು ಮಹಿಳೆಗೆ ಹಾಗೂ ಪುರುಷನಿಗೆ ಸಂಬಂಧಪಟ್ಟ ಹಾಗೆ ಭಿನ್ನ ಭಿನ್ನ ಭೇದ-ಭಾವದ ಸಂವೇದನೆ ಹೊಂದಿರುತ್ತವೆ ಎಂಬುದನ್ನು ಮಹಿಳೆಯರ ಅನುಭವ ಹೇಳುತ್ತದೆ. ಇದು ನ್ಯಾಯಾಧೀಶರ ಅಭಿಪ್ರಾಯ, ನಡತೆ, ಅವರ ಹಾವ-ಭಾವಗಳಲ್ಲಿ ವ್ಯಕ್ತವಾಗುತ್ತದೆ ಎಂಬುದೂ ಕೂಡಾ ಮಹಿಳೆಯರ ಅನುಭವವಾಗಿದೆ.

64% ಮಹಿಳಾ ವಕೀಲರು ತಮ್ಮ ಪುರುಷ ಸಹೋದ್ಯೋಗಿಗಳಿಂದ 'ಪೋಷಕ ಹಾಗೂ ಸಲುಗೆಯ' ವರ್ತನೆಯನ್ನು ಎದುರಿಸುತ್ತಿರುತ್ತಾರೆ. ಎಲ್ಲಿವರೆಗೆ ಎಂದರೆ ಅವರನ್ನು ಕಡೆಗಾಣಿಸಿ, ಅವರನ್ನು ಅರ್ಥಹೀನರನ್ನಾಗಿ, ಅವರ ಮೇಲೆ ದೌರ್ಜನ್ಯ ನಡೆಸುವವರೆಗೂ ಇವು ನಡೆಯುತ್ತಿರುತ್ತವೆ.

6 ಡಿಸೆಂಬರ್ 1989ರಂದು ಕೆನಡಾದಲ್ಲಿ ಇಂಜನಿಯರ್ ಓದುತ್ತಿದ್ದ 14 ಜನ ಮಹಿಳೆಯರನ್ನು ಗುಂಡಿಟ್ಟು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ. ಅವರಿಂದಾಗಿ ತನಗೆ ಆ ಕಾಲೇಜಿನಲ್ಲಿ ಸೀಟ್ ಸಿಗಲಿಲ್ಲ ಎಂದು ಆತ ಆಪಾದಿಸಿದ್ದನು. ಮರಣ ಪೂರ್ವದಲ್ಲಿ ಬರೆದ ಪತ್ರದಲ್ಲಿ ಸ್ತ್ರೀವಾದಿಗಳನ್ನು ಖಂಡಿಸಿ, ಆತ ಟೀಕಿಸಿದ್ದನು.

ಇಂತಹ ಕುರುಡು ಲಿಂಗ ತಾರತಮ್ಯಗಳ ಜೊತೆಯಲ್ಲಿ ಸಾಮಾಜಿಕ ವ್ಯವಸ್ಥೆ ವರ್ತನೆಯಲ್ಲಿ ಆಳವಾಗಿ ಬೇರೂರಿರುವ ಮಿಥ್‌ಗಳು ಮತ್ತು ಅಪನಂಬಿಕೆಗಳು ಮಹಿಳೆ ಹಿಂಸೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಅಡ್ಡಗೋಡೆಗಳಾಗಿವೆ. ಇಂತಹ ಸತ್ಯಾಂಶವನ್ನು ನಿರಾಕರಿಸಿ, ಮಾನ-ಮರ್ಯಾದೆ, ಗೌರವ ಕಾಪಾಡಿಕೊಳ್ಳುವ ಹೊಣೆಯನ್ನು ಮಹಿಳೆಯರ ಮೇಲೆಯೇ ಹೇರಲಾಗಿದೆ. ಮಹಿಳೆಯರ ಮೇಲೆ ನಡೆಯುವ ಹಿಂಸೆಗೆ ಪುರುಷರು ಕಾರಣೀಕರ್ತರಲ್ಲ ಎನ್ನಲಾಗುತ್ತಿದೆ. ಈ ರೀತಿಯ ತಪ್ಪು ಅಭಿಪ್ರಾಯ, ವಾದಗಳಿಂದ ಲೈಂಗಿಕ ಹಿಂಸೆ, ಅತ್ಯಾಚಾರ, ವೇಶ್ಯಾವಾಟಿಕೆಯಂತಹ ಹಿಂಸೆಗಳ ಬಗ್ಗೆ ರೂಪು-ರೇಖೆ

ಕಟ್ಟುವುದನ್ನು ನಾವು ತೊಲಗಿಸುವ ಹಾಗೂ ಬಹಿರಂಗ ಪಡಿಸುವ ಅಗತ್ಯ ಇದೆ.

1. ಲೈಂಗಿಕ ಕಿರುಕುಳ

ನೌಕರಿ ನೀಡಿದ ಯಜಮಾನನಾಗಲೀ, ಕಛೇರಿಯ ವ್ಯವಸ್ಥಾಪಕನಾಗಲೀ ಅಥವಾ ಮಹಿಳೆಯ ಮೇಲೆ ಅಧಿಕಾರ ಚಲಾಯಿಸುವಂತಹ ಯಾವುದೇ ಪುರುಷನಾಗಲೀ ಮಹಿಳೆಗೆ ಬೇಡವಾದ ಲೈಂಗಿಕ ಆಸಕ್ತಿ ತೋರಿಸಿ ಹಿಂಸಿಸುವುದು ಲೈಂಗಿಕ ಕಿರುಕುಳವಾಗಿರುತ್ತದೆ. ಮಹಿಳೆಗೆ ಕಸಿವಿಸಿ ಉಂಟುಮಾಡುವ ಲೈಂಗಿಕತೆಗೆ ಸಂಬಂಧಪಟ್ಟ ಪದಗಳ ಬಳಕೆ, ಮಹಿಳೆಯೊಡನೆ ಲೈಂಗಿಕ ಚೇಷ್ಟೆ ಎಸಗುವುದು ಮತ್ತು ಆಕೆಯೊಡನೆ ಲೈಂಗಿಕ ಸಂಪರ್ಕ ಬಯಸುವುದು, ಲೈಂಗಿಕ ಆಸಕ್ತಿಯಿಂದ ಆಕೆಯನ್ನು ಮುಟ್ಟುವುದು ಇವೆಲ್ಲವೂ ಲೈಂಗಿಕ ಕಿರುಕುಳದ ಅಡಿಯಲ್ಲಿ ಬರುತ್ತಿವೆ. ಪ್ರತಿ ಹೆಂಗಸಿಗೂ ಈ ಲೈಂಗಿಕ ಕಿರುಕುಳದ ಅಪಾಯ ಇದ್ದೇ ಇದೆ. ಆಕೆ ತನ್ನ ಕುಟುಂಬಕ್ಕೋಸ್ಕರ ಹಳ್ಳಿಯಲ್ಲಿ ದುಡಿಯುತ್ತಿರಲಿ, ಅಥವಾ ಪಟ್ಟಣದಲ್ಲಿ ಫ್ಯಾಕ್ಟರಿಯಲ್ಲಿರಲಿ, ಈ ಕಿರುಕುಳದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ಕಲ್ಪನೆ : ಲೈಂಗಿಕ ಕಿರುಕುಳ ವಿರಳವಾಗಿದೆ

ಸತ್ಯ : ಲೈಂಗಿಕ ಕಿರುಕುಳ ವ್ಯಾಪಕವಾಗಿ ಹಬ್ಬಿರುವ ಸಂಗತಿಯನ್ನು ಈಗಾಗಲೇ ಹಲವಾರು ಸಮೀಕ್ಷೆಗಳು, ಅಧ್ಯಯನಗಳು ಬೆಳಕಿಗೆ ತಂದು ಸಾಬೀತುಗೊಳಿಸಿವೆಯಾದರೂ ಅವು ವರದಿಗಳಾಗಿಯೇ ಉಳಿದಿವೆ.

ಐ.ಪಿ.ಸಿ. ಸೆಕ್ಷನ್ 509ರ ಪ್ರಕಾರ ಲೈಂಗಿಕ ಕಿರುಕುಳಕ್ಕೆ ದಂಡನೆ ವಿಧಿಸಲಾಗಿದೆ. ಆದರೆ ದಾಖಲಾಗುವ ಘಟನೆಗಳು ಮಾತ್ರ ಅತಿ ವಿರಳ. ಇದರಲ್ಲಿ ಹಲವಾರು ಮೊಕದ್ದಮೆಗಳು ಸಾಕ್ಷಾಧಾರಗಳಿಲ್ಲದೇ ವಜಾ ಆಗಿವೆ. ಹಿರಿಯ ಐ.ಎ.ಎಸ್. ಅಧಿಕಾರಿ ರೂಪಮ್ ಬಜಾಜ್ ಡಿಯೋಲ್‌ರವರು ಡಿ.ಐ.ಜಿ., ಕೆ.ಪಿ.ಎಸ್. ಗಿಲ್‌ರ ವಿರುದ್ಧ ಮೊಕದ್ದಮೆ ಹೂಡಿದ್ದರು. ಸರ್ಕಾರ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ, ಉಚ್ಚ ನ್ಯಾಯಾಲಯ ಕೂಡಾ ಮೊಕದ್ದಮೆಯನ್ನು ವಜಾಗೊಳಿಸಿತು.

ಶೇಕಡಾ 60%ರಷ್ಟು ದುಡಿಯುವ ಮಹಿಳೆಯರು, ಮತ್ತು 55%ರಷ್ಟು ಕಾಲೇಜು ವಿದ್ಯಾರ್ಥಿನಿಯರು ಇಂತಹ ಅಪರಾಧಕ್ಕೆ ಬಲಿಯಾಗಿದ್ದಾರೆ ಎಂದು ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ವರದಿ ಮಾಡಿದೆ.

'ಔಟ್-ಲುಕ್' ಪತ್ರಿಕೆಯು (19-4-2001) ಎರಡು ತನಿಖಾ ವರದಿಗಳನ್ನು ಪ್ರಕಟಿಸಿದೆ. ನ್ಯಾಶನಲ್ ಕಮಿಶನ್ ಫಾರ್ ವುಮನ್ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ಐದು ರಾಜ್ಯಗಳಲ್ಲಿ ಸಮೀಕ್ಷೆ ನಡೆಸಿದೆ. ಇದರ ಪ್ರಕಾರ 68% ಮಹಿಳೆಯರು ಈ ಅಪರಾಧಕ್ಕೆ ಒಳಗಾಗಿದ್ದಾರೆ. 26% ಮಹಿಳೆಯರು ದೈಹಿಕ ಕಿರುಕುಳಕ್ಕೆ ಒಳಗಾಗಿದ್ದಾರೆ. ಮತ್ತು 33% ಮಹಿಳೆಯರು ಲಿಂಗದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಮಾರ್ಚ್ 1999ರಲ್ಲಿ ದೆಹಲಿಯ ಸಾಕ್ಷಿ ಸಂಸ್ಥೆಯು 72% ಮಹಿಳೆಯರು ಹಾಗೂ 74% ಪುರುಷರು ಲೈಂಗಿಕ ಕಿರುಕುಳದ ಬಗ್ಗೆ ಕೇಳಿದ್ದಾರೆ ಅಥವಾ ಅನುಭವಿಸಿದ್ದಾರೆ ಎಂಬುದನ್ನು 'ಔಟ್-ಲುಕ್' ಪ್ರಕಟಿಸಿತು.

ಫ್ರೀ ಪ್ರೆಸ್ ಪತ್ರಿಕೆಯಲ್ಲಿ (2-2-2000) ಡಾ. ಎ.ಎನ್. ನಾಡರ್‌ರವರು ಹಿರಿಯ ಐ.ಎ.ಎಸ್. ಅಧಿಕಾರಿ ನಳಿನಿ ನೆಟ್ಟೋ ಜೊತೆ ಕೆಟ್ಟದ್ದಾಗಿ ವರ್ತಿಸಿದ್ದಾಗಿ ವರದಿ ಮಾಡಿದೆ. ಈ ಮೊಕದ್ದಮೆಯ ತೀರ್ಪು ಇನ್ನೂ ದೊರೆತಿಲ್ಲ."

ಕಲ್ಪನೆ: ಲೈಂಗಿಕ ಕಿರುಕುಳದ ಘಟನೆಗಳನ್ನು ಅತಿಶಯೋಕ್ತಿಯಿಂದ ಪರಿಗಣಿಸುತ್ತಾರೆ. ಕಿರುಕುಳ ಎನ್ನಲಾದ ಇವು ಅಪಾಯವಿಲ್ಲದ ಲಲ್ಲೆ ಹೊಡೆಯುವಿಕೆ ಹಾಗೂ ಕ್ಷುಲ್ಲಕ ಸಂಗತಿಗಳು.

ಸತ್ಯ : ಲೈಂಗಿಕ ಕಿರುಕುಳ ಮಹಿಳೆಯರನ್ನು ನಾಶಪಡಿಸಬಲ್ಲದು. ಹಲವಾರು ಇಂತಹ ಕಿರುಕುಳಗಳು 'ಲಲ್ಲೆ ಹೊಡೆಯುವಿಕೆ ಅಲ್ಲ, ಮತ್ತು ಮನಃಪೂರ್ವಕವಾದ ಲೈಂಗಿಕ ಆಸಕ್ತಿಯೂ ಅಲ್ಲ ಎಂಬುದನ್ನು ಅಧ್ಯಯನಗಳು ಸೂಚಿಸುತ್ತವೆ. ಆದರೆ ಇದು ಮಹಿಳೆಯರ ಮೇಲಿನ ಆಕ್ರಮಣವಾಗಿದೆ ಮತ್ತು ಮಹಿಳೆಯರನ್ನು ಸತತವಾಗಿ ಭೀತಿಗೆ ಒಳಪಡಿಸಿ ಅಪಮಾನ ಎಸಗುತ್ತದೆ. ಹಲವಾರು ದುಡಿಯುವ ಮಹಿಳೆಯರು ಈ ಕಾರಣಗಳಿಂದಾಗಿ ಕೆಲಸ ಬಿಡುವುದು, ಹಾಗೂ ಓದುತ್ತಿರುವ ವಿದ್ಯಾರ್ಥಿನಿಯರು ಶಾಲಾ, ಕಾಲೇಜುಗಳನ್ನು ಬಿಡುವುದು ಸಾಮಾನ್ಯವಾದ ವಿಚಾರವಾಗಿದೆ. ಭೀತಿ ತುಂಬಿಕೊಂಡ ಮಹಿಳೆಯರು ಗಂಭೀರವಾದ ಮಾನಸಿಕ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿಂದ ನರಳುತ್ತಾರೆ.

ಕಲ್ಪನೆ: ಕೆಲಸ ನೀಡಿದ್ದ ಯಜಮಾನನ ಮೇಲೆ ಅಥವಾ ಬೇರೆ ಯಾರ ಮೇಲಾದರೂ ಕೋಪವಿದ್ದಲ್ಲಿ ದ್ವೇಷ ಸಾಧಿಸಲು ಮಹಿಳೆಯರು ವಿನಾ ಕಾರಣ ತಮ್ಮ ಮೇಲೆ ಲೈಂಗಿಕ ಕಿರುಕುಳ ನಡೆದಿದೆ ಎಂದು ಸುಳ್ಳು ವರದಿ ಮಾಡುತ್ತಾರೆ.

ಸತ್ಯ: ಕೇವಲ 1% ರಷ್ಟು ದೂರುಗಳು ಮಾತ್ರ ತಪ್ಪಾಗಿವೆ. ಎಂದು ಅಧ್ಯಯನದ ಮೂಲಗಳು ತಿಳಿಸಿವೆ. ದೂರು ನೀಡುವಂತಹ

ಘಟನೆ ನಡೆದಿದ್ದರೂ ಮಹಿಳೆಯರು ದೂರು ನೀಡಲು ಮುಂದೆ ಬರುವುದಿಲ್ಲ.

ಕಲ್ಪನೆ: ಲೈಂಗಿಕ ಕಿರುಕುಳ ಒಂದು ಸಹಜ ವರ್ತನೆ ಮತ್ತು ಅದು ಚೇಷ್ಟೆ ಮತ್ತು ವಿನೋದದಿಂದ ಕೂಡಿರುತ್ತದೆ. ಸುಮ್ಮನಿರಲಾರದ ಮಹಿಳೆಯರು ಇದಕ್ಕೆ ಹೆಚ್ಚಿನದಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ.

ಸತ್ಯ : ಲೈಂಗಿಕ ಕಿರುಕುಳ ಅಧಿಕಾರದ ಪ್ರತೀಕ. ಇದು ಮಹಿಳೆಯರನ್ನು ದಬ್ಬಾಳಿಕೆಗೆ ಒಳಪಡಿಸಿ ಕಸಿವಿಸಿ ಉಂಟುಮಾಡುತ್ತಿದೆ ಹಾಗೂ ಕೀಳಾಗಿ ನೋಡುತ್ತದೆ. ಇದು ಆರೋಗ್ಯಕರ ಮಾನವೀಯ ಸಂಬಂಧಗಳ ಅಭಿವ್ಯಕ್ತಿಯಲ್ಲ. ಹಲವಾರು ಘಟನೆಗಳಲ್ಲಿ ಲೈಂಗಿಕ ಕಿರುಕುಳ ಪುರುಷರು ಮಹಿಳೆಯ ಮೇಲೆ ನಡೆಸುವ ದೌರ್ಜನ್ಯವನ್ನು ಒಳಗೊಂಡಿರುತ್ತದೆ.

ಕಲ್ಪನೆ: ಇಂತಹ ವರ್ತನೆಗಳನ್ನು ನಿರ್ಲಕ್ಷಿಸುವುದರಿಂದ, ಲೈಂಗಿಕ ಕಿರುಕುಳ ಇಲ್ಲದಂತಾಗುತ್ತದೆ.

ಸತ್ಯ : ಇಲ್ಲ. ಅದು ಇಲ್ಲದಂತಾಗುವುದಿಲ್ಲ. ಇಂತಹ ವರ್ತನೆಯನ್ನು ನಿರ್ಲಕ್ಷಿಸುವುದರಿಂದ ಅದು ಹೆಚ್ಚು ಪರಿಣಾಮಕಾರಿಯಾಗುವುದಿಲ್ಲ. ಕಿರುಕುಳ ನೀಡುವವರು ತಾವಾಗಿಯೇ ಇದನ್ನು ನಿಲ್ಲಿಸುವುದಿಲ್ಲ. ಇಂತಹ ವರ್ತನೆಯನ್ನು ನಿರ್ಲಕ್ಷಿಸುವುದರಿಂದ ಅದಕ್ಕೆ ಕ್ಷಮೆ ದೊರಕಿದೆ ಎಂತಲೋ ಅಥವಾ ಅದಕ್ಕೆ ಉತ್ತೇಜನ ದೊರಕಿದೆ ಎಂತಲೋ ತಪ್ಪಾಗಿ ಪರಿಗಣಿಸಲಾಗುವುದು.

ಕಲ್ಪನೆ: ಲೈಂಗಿಕ ಕಿರುಕುಳದ ಅಪವಾದ ಇಲ್ಲದೇ ನೀವು ಗೌರವಿಸುವ ಯಾರಿಗೂ ಮೆಚ್ಚುಗೆ ಸೂಚಿಸುವುದಕ್ಕೆ ಆಗುವುದೇ ಇಲ್ಲ.

ಸತ್ಯ : ಸಂಶಯವಿಲ್ಲದಿರುವ ಸಂದರ್ಭದಲ್ಲಿ ಮೆಚ್ಚುಗೆ ವ್ಯಕ್ತಪಡಿಸುವುದು ಸಾಮಾನ್ಯವಾಗಿ ಲೈಂಗಿಕ ಕಿರುಕುಳ ಎಂದು ಪರಿಗಣಿತವಾಗಿಲ್ಲ. ಮೆಚ್ಚುಗೆ ಸೂಚಿಸುವುದು ಒತ್ತು ನೀಡುವ ಒಂದು ವರ್ತನೆ ಹೊರತು ಅದರ ಹಿಂದೆ ದುರುದ್ದೇಶ ಇರುವುದಿಲ್ಲ.

ಲೈಂಗಿಕ ಕಿರುಕುಳದ ಜೊತೆಗೆ ವಿವಿಧ ರೀತಿಯ ಲೈಂಗಿಕ ಹಿಂಸೆಗೆ ಮಹಿಳೆ ಒಳಗಾಗಿದ್ದಾಳೆ. ಅವನ್ನು ಲೈಂಗಿಕ ಅತ್ಯಾಚಾರ ಎಂದು ಸಾಮಾನ್ಯವಾಗಿ ಜನರು ಪರಿಗಣಿಸುವುದಿಲ್ಲ. ಉದಾ:ಕೆಲವೊಮ್ಮೆ ಜೀವನದ ಗತಿಗಳು ಬದಲಾದಾಗ ಮಹಿಳೆಯರು ಬಲವಂತದ ಲೈಂಗಿಕ ಕ್ರಿಯೆಯನ್ನು ಸಮಾಜ ಅಪರಾಧ ಎಂದು ಪರಿಗಣಿಸುವುದಿಲ್ಲ. ಆದರೂ ಈ ರೀತಿಯ ಬಲವಂತ ಕೂಡಾ ಮಹಿಳೆಯ ಮೇಲೆ ನಡೆಯುವ ಶೋಷಣೆಯಾಗಿದೆ.

ವೇಶ್ಯಾವಾಟಿಕೆ

ಮಹಿಳಾ ಹಿಂಸೆಯ ಮತ್ತೊಂದು ರೂಪ-ವೇಶ್ಯಾವಾಟಿಕೆ. ಇದನ್ನು ಹಿಂದೆ ಸಾಮಾಜಿಕ ಪಿಡುಗು ಎಂದು ಗುರುತಿಸಲಾಗುತ್ತಿತ್ತು. ವೇಶ್ಯಾವಾಟಿಕೆಗೆ ಕೂಡಾ ಲೈಂಗಿಕತೆಗೆ ಇರುವಂತೆ ಹಲವಾರು ಕಲ್ಪನೆಗಳು ಇವೆ. ವೇಶ್ಯಾವಾಟಿಕೆ ನಮ್ಮವರಲ್ಲದ ಬೇರೆ ಯಾವುದೋ ಮಹಿಳೆಯರನ್ನು ಒಳಗೊಂಡಿದೆ ಎಂಬುದು ಇಂತಹ ಕಲ್ಪನೆಗಳಲ್ಲಿ ಒಂದು. ವೇಶ್ಯಾವಾಟಿಕೆಯಲ್ಲಿ ಪಾಲುಗೊಳ್ಳುವವರು ನಮ್ಮ ತಾಯಿ, ತಂಗಿ, ಅಥವಾ ಮಗಳಲ್ಲ, ಬೇರೆ ಯಾರೋ ನಮಗೆ ತಿಳಿಯದವರು. ಲೈಂಗಿಕ ಕಿರುಕುಳ ನೀಡುವ ಅಥವಾ ವೇಶ್ಯಾವಾಟಿಕೆಯಲ್ಲಿ ಒಬ್ಬನಾಗಿ ಪಾಲ್ಗೊಳ್ಳುವ ಪುರುಷರು ನಮ್ಮ ತಂದೆಯಲ್ಲ, ಅಣ್ಣ-ತಮ್ಮಂದಿರಲ್ಲ ಅಥವಾ ಪ್ರಿಯತಮನಲ್ಲ. ಬೇರೆ ಯಾರೋ ನಮಗೆ ತಿಳಿಯದವರು. ನಾವು ತಿಳಿದುಕೊಳ್ಳಲೂ ಇಚ್ಛೆ ಪಡುವುದಿಲ್ಲ. ಹಲವಾರು ಮಂದಿಗೆ ಈ ಮಹಿಳೆಯರು 'ದೇಹ ಮಾರಾಟ ಮಾಡುವ' ಅಥವಾ 'ಕೆಂಪು ದೀಪ'ಗಳ ಕೆಳಗೆ ದುಡಿಯುವವರು ಎಂಬುದಷ್ಟೇ ಕಲ್ಪನೆ. ಆದರೆ ಈ ದೇಹ ಮಾರಾಟ ಮಾಡಿಕೊಂಡು ದುಡಿಯುವ ಮಹಿಳೆಯರು ಬೇರೆ, ಬೇರೆಯ ಸ್ತರದವರಾಗಿರುತ್ತಾರೆ. ಒಬ್ಬ ವೇಶ್ಯೆ ಚಿಕ್ಕ ವಯಸ್ಸಿನ ಹುಡುಗಿ ಯಾಗಿರಬಹುದು, ಅಥವಾ ಹಲವಾರು ಮಕ್ಕಳಿರುವ ವಯಸ್ಸಾದ ಒಬ್ಬ ದೊಡ್ಡ ಹೆಂಗಸಾಗಿರಬಹುದು. ಆಕೆ ವೇಶ್ಯಾವಾಟಿಕೆಯಲ್ಲಿ ದುಡಿಯಬಹುದು, ತಲೆ ಹಿಡುಕರ ಜೊತೆ ರಸ್ತೆಯಲ್ಲಿ ದುಡಿಯಬಹುದು, ಅಥವಾ ಹೆಂಡದಂಗಡಿಯಲ್ಲಿ ದುಡಿಯುತ್ತಿರ ಬಹುದು. ಈ ಮಹಿಳೆಯರು ದೇಹ ಮಾರಾಟ ಮಾಡುವುದಕ್ಕೆ ಹಣದ ಮುಗ್ಗಟ್ಟೇ ಕಾರಣವಾಗಿರುತ್ತದೆ.

ಕಲ್ಪನೆ: ನಡತೆ ಸರಿ ಇಲ್ಲದ ಸೋಮಾರಿ ಮಹಿಳೆಯರು ಈ ವೇಶ್ಯಾವಾಟಿಕೆಗೆ ಇಳಿಯುತ್ತಾರೆ.

ಸತ್ಯ : ಆದರೆ ಇದಕ್ಕೆ ವಿರುದ್ಧವಾಗಿ ಬೇರೆ ಯಾವುದೇ ಜೀವನೋಪಾಯದ ಮಾರ್ಗವಿಲ್ಲದೇ, ತೀವ್ರ ಆರ್ಥಿಕ ಮುಗ್ಗಟ್ಟಿನಿಂದಾಗಿ ಮಹಿಳೆಯರು ವೇಶ್ಯಾವಾಟಿಕೆಯ ವೃತ್ತಿಗೆ ಇಳಿಯುತ್ತಾರೆ. ಮಾಡಿದ ಸಾಲ ತೀರಿಸುವುದಕ್ಕೋ, ಮಕ್ಕಳ ಪಾಲನೆ ಪೋಷಣೆಗೋ, ನಿತ್ಯದ ಜೀವನ ನಡೆಸುವುದಕ್ಕೋ, ತುರ್ತು ಔಷಧಗಳನ್ನು ಕೊಳ್ಳುವುದಕ್ಕೋ ಮತ್ತು ಅನೇಕ ಅಗತ್ಯದ ವಸ್ತುಗಳನ್ನು ಕೊಳ್ಳುವುದಕ್ಕೋ ಅವರಿಗೆ ಹಣದ ಅಗತ್ಯ ಇದ್ದೇ ಇರುತ್ತದೆ.

ಇಂತಹ ಹತಾಶೆಯ ಅವಶ್ಯಕತೆಗಳು ಹುಟ್ಟಿಕೊಳ್ಳುವ ಸಂದರ್ಭಗಳು ಹಲವಾರು ಬಾರಿ ಅವರ ಹಿಡಿತದಲ್ಲಿ ಇರುವುದಿಲ್ಲ.

ಇದಕ್ಕೆ ಕಾರಣ ಹಲವಾರು, ಗಂಡನ ಮರಣ, ಗಂಡನಿಂದ ವಿಚ್ಛೇದನ ಪಡೆಯುವುದು, ಇದ್ದಕ್ಕಿದ್ದಂತೆ ದೂರವಾಗುವ ಗಂಡ, ಮತ್ತು ಗಂಡನ ಮನೆಯವರು. ಅಥವಾ ಆಕೆ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗಿರಬಹುದು. ವಿವಾಹಕ್ಕೆ ಪೂರ್ವ ಗರ್ಭಿಣಿಯಾದ್ದರಿಂದ ಯಾರೂ ಆಕೆಯನ್ನು ಮದುವೆಯಾಗಲು ಮುಂದೆ ಬರದಿರಬಹುದು. ಆಕೆಗೆ ಕೆಲಸದ ನೈಪುಣ್ಯತೆ ಇಲ್ಲದಿರುವುದು, ಹಣ ಸಂಪಾದಿಸುವ ಬೇರೆ ಯಾವುದೇ ಮಾರ್ಗ ಕಾಣದಿರುವುದರಿಂದ ತನ್ನ ಸ್ವಂತದ ಆಸ್ತಿಯಾದ ದೇಹವನ್ನು ಮಾರಾಟ ಮಾಡಿ ಬದುಕಿ ಉಳಿಯಲು ಪ್ರಯತ್ನ ಪಡುತ್ತಾಳೆ.

ಹಲವಾರು ಮಹಿಳೆಯರನ್ನು ಬಲವಂತವಾಗಿ ವೇಶ್ಯಾವಾಟಿಕೆಗೆ ತಳ್ಳಲಾಗುತ್ತದೆ. ಹೆಚ್ಚು ಹಣದ ಕೆಲಸ ಕೊಡಿಸುತ್ತೇವೆಂಬ ಹಾಗೂ ಶ್ರೀಮಂತ ಗಂಡನನ್ನು ದೊರಕಿಸಿಕೊಡುತ್ತೇವೆ ಎಂಬ ಆಮಿಷ ತೋರಿಸಿ ಹಲವಾರು ಮಹಿಳೆಯರನ್ನು ದೂರದ ಮಧ್ಯ ಪ್ರಾಚ್ಯ ದೇಶಗಳಿಗೆ ಕರೆದೊಯ್ದು ವೇಶ್ಯಾವಾಟಿಕೆಗೆ ತಳ್ಳಲಾಗುತ್ತಿದೆ. ನಂತರ ದೇಹ ಮಾರಾಟವನ್ನು ನಿಲ್ಲಿಸುವುದಕ್ಕೆ ಆಕೆಗೆ ಸಾಧ್ಯವಾಗುವುದೇ ಇಲ್ಲ. ಆ ಹೆಂಗಸು ಆ ದೇಶದಲ್ಲಿರುವ ಕಾನೂನಿಗೆ ವಿರುದ್ಧವಾಗಿ ಇದ್ದಿರಬಹುದಾದ್ದರಿಂದ ಯಾವುದೇ ಹಕ್ಕು-ಬಾಧ್ಯತೆಗಳಿಂದ ವಂಚಿತರಾಗಿರಬಹುದು. ಆರ್ಥಿಕ ಮುಗ್ಗಟ್ಟು ಇರಬಹುದು. ಅವಳ ಕುಟುಂಬಕ್ಕೆ ಮರಳಿ ಹೋಗಬಹುದಾದ ಯಾವುದೇ ಮಾರ್ಗ ಅವಳ ಪಾಲಿಗೆ ಮುಚ್ಚಿರಬಹುದು. ಹಿಂತಿರುಗಿ ಕೊಡಲಾಗದಷ್ಟು ಸಾಲದ ಹೊರೆ ಇರಬಹುದು, ಈ ದೇಹ ಮಾರಾಟದ ನೌಕರಿ ನೀಡಿದ ಯಜಮಾನ ಆಕೆಗೆ ಭೀತಿ ಉಂಟುಮಾಡಿ ದುಡ್ಡು ಕೇಳುತ್ತಿರಬಹುದು, ಆಕೆಯನ್ನು ಲೈಂಗಿಕ ಗುಲಾಮಗಿರಿಗೆ ಒಡ್ಡಿರಬಹುದು.

ಕಲ್ಪನೆ : ವೇಶ್ಯಾವಾಟಿಕೆಯನ್ನು ಮಹಿಳೆಯರು ಆಯ್ಕೆ ಮಾಡಿಕೊಳ್ಳುತ್ತಾರೆ.

ಸತ್ಯ : ಇದು ಸತ್ಯಕ್ಕೆ ದೂರವಾದ ವಿಚಾರ. ಹಿಂಸೆಗೆ ಬಲಿಯಾದ ಹೆಣ್ಣುಮಕ್ಕಳು (ಲೈಂಗಿಕ ಅತ್ಯಾಚಾರ, ಹೊಡೆತ, ಚಿಕ್ಕಮಕ್ಕಳಲ್ಲಿ ಲೈಂಗಿಕ ಆಸಕ್ತಿ ತೋರಿಸುವುದು ಇತ್ಯಾದಿ) ತಮ್ಮ ದೈಹಿಕ ಸಂವೇದನೆಯನ್ನು ಕ್ರಮೇಣ ಕಳೆದುಕೊಳ್ಳುತ್ತಾರೆ. ತಮ್ಮ ದೇಹ ತಮ್ಮದಲ್ಲ ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳುವುದರಿಂದ ಮಹಿಳೆಯರು ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಯಾಕೆಂದರೆ ಬೇರೆ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವೇ ಅವರಿಗೆ ಇರುವುದಿಲ್ಲ. ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಒತ್ತಡಗಳ ಕಠಿಣತೆಯಿಂದ ನರಳುವ ಈ ಮಹಿಳೆಯರಿಗೆ ಆಯ್ಕೆಯ ಪ್ರಶ್ನೆ ಇರುವುದಿಲ್ಲ. ಹಾಗಾಗಿ ವೇಶ್ಯೆಯರಾಗುತ್ತಾರೆ. ಈ ಪರಿಸ್ಥಿತಿ ಅನುಭವಿಸದ ಬೇರೆ ಮಹಿಳೆಯರು ವೇಶ್ಯೆಯರಾಗುವುದಿಲ್ಲ. ಹೆಚ್ಚು ಮಂದಿ ವೇಶ್ಯೆಯರು ಹಿಂಸೆಯ ಬಲಿಪಶುಗಳಾಗಿದ್ದಾರೆ ಎನ್ನುವುದು ತಿಳಿದ ವಿಚಾರವೇ ಆಗಿದೆ. ●

ಶಾಪ

✍ ಸರಸ್ವತಿ ದು.

ಭಿಕ್ಷೆ ಎತ್ತಿದ ರೊಟ್ಟಿಗಳ
ಎಣಿಸುತ್ತ ಕೂತ ಕಂದಮ್ಮಗಳೆ
ಭೀತಿಯ ನೆರಳಿನಲ್ಲಿ ಬೆದರುತ್ತಲೆ
ಪುಟ್ಟ ಗೊಂಬೆಗಳನು ಅವುಚಿ
ಹಿಡಿದ ಜೀವದ ಬೊಂಬೆಗಳ
ಅಷ್ಟೋತ್ತರದ ಒಂಟೆಗೆ ಆಸರೆ ಹುಡುಕಿ
ಹೊರಟ ಚೋಟುದ್ದದ ಪೋರನೆ
ನಿಮ್ಮ ಕಂಗೆಟ್ಟ ಕಣ್ಣಿಂದ
ಹನಿದ ಕಣ್ಣೀರಿನ ಬಿಸುಪು
ಮತಾಂಧ ಮದಾಂಧರಿಗೆ ತಗುಲದು

ಅದಕೆ ನೀವೆಲ್ಲ ಶಪಿಸಿ ಕಂದಮ್ಮಗಳೆ
ಮುಗ್ಧ ಎದೆಯಾಳದಿಂದ

ನಿಮ್ಮ ನಾಳೆಗಳನ್ನು
ಹೊಸಕಿ ಕೂಪಕೆ ಎಸೆದವರ
"ಇಂದು" ಬಿರಿದು ಚಿಂದಿಯಾಗಲೆಂದು

ನಿಮ್ಮ ಕಣ್ಣೊಳಗಿನ ಕನಸುಗಳ ಕಸಿದವರ
ನಿದ್ದೆ ಇಂಗಿ ಹೋಗಲೆಂದು
ಗುಂಡಿನ ಮಳೆ ಸುರಿಸಿದ
ಬಂದೂಕಿನ ತುದಿಯಲಿ
ಅನ್ನದ ಚೀಲ ನೇತಾಡಿಸುವವರ
ಹಸಿವು ಬತ್ತಿ ಹೋಗಲೆಂದು
ಶಪಿಸಿ ಕಂದಮ್ಮಗಳೆ
ಆ ದಿಕ್ಕೆಟ್ಟ ದೇವನಿಗೆ
ತಥಾಸ್ತು ಎನ್ನದೆ ಬೇರೆ ದಾರಿ ಇಲ್ಲ. ●

ಕಳೆದುಹೋದ ಪೀಳಿಗೆಯ ಒಡಲದನಿ

ಇಪ್ಪತ್ತೊಂದನೇ ಶತಮಾನದ ಮೊದಲ ಒಲಿಂಪಿಕ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಅಚ್ಚರಿಯ ಘಟನೆಯೊಂದು ಸಂಭವಿಸಿತು. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಸೆಪ್ಟೆಂಬರ್ 15ರಂದು ತಾಂತ್ರಿಕ ಆವಿಷ್ಕಾರಗಳಿಂದ ಒಲಿಂಪಿಕ್ ಸಮಾರಂಭವನ್ನು ಯಕ್ಷಲೋಕವನ್ನಾಗಿ ಪರಿವರ್ತಿಸಲಾಗಿತ್ತು. ಜಗತ್ತನ್ನು ಸುತ್ತಿಬಂದ ಒಲಿಂಪಿಕ್ ದೀವಟಿಗೆ ಉದ್ಘಾಟನಾ ಸಮಾರಂಭದ ಕೊನೆಯ ಕ್ಷಣಗಳಲ್ಲಿ ಕ್ರೀಡಾಂಗಣ ಪ್ರವೇಶಿಸಿತು. ಪ್ರೇಕ್ಷಕರಾಗಿಯೂ ಮಹಿಳೆಯರ ಮೇಲೆ ನಿಷೇಧ ಹೇರಿದ್ದ ಪುರಾತನ ಒಲಿಂಪಿಕ್ಸ್‌ನ ತಪ್ಪುಗಳನ್ನು ಸರಿಪಡಿಸಲೆಂಬಂತೆ ಆಸ್ಟ್ರೇಲಿಯಾದ ಐವರು ಒಲಿಂಪಿಕ್ ಪದಕ ವಿಜೇತ ಮಹಿಳೆಯರು ಕೈಯಿಂದ ಕೈಯಿಗೆ ಜ್ಯೋತಿಯನ್ನು ಸಾಗಿಸಿದರು. ಆರನೆಯವಳಾಗಿ ಜ್ಯೋತಿಯನ್ನು ಕೈಗೆ ತೆಗೆದುಕೊಂಡವಳು ಇಪ್ಪತ್ತೇಳು ವರ್ಷದ ಕ್ಯಾಥಿ ಫ್ರೀಮನ್. ಆಕೆ ಶತಮಾನಗಳ ಕಾಲ ಆಸ್ಟ್ರೇಲಿಯಾದಲ್ಲಿ ಆವರಿಸಿದ್ದ ಅಂಧಕಾರವನ್ನು ತೊಡೆಯುವಂತೆ ದೀವಟಿಗೆಯನ್ನು ಎತ್ತಿ ಹಿಡಿದು ನಿಧಾನವಾಗಿ ಪಾವಟಿಗೆಯೇರಿದಳು. ಮೈಯನ್ನು ಅಪ್ಪಿಕೊಂಡ ಬಿಳಿಯುಡುಗೆಯನ್ನು ತೊಟ್ಟಿದ್ದ ಅವಳು ಅಟ್ಟಣೆಯೇರಿ ಜಗತ್ತನ್ನೇ ದಿಟ್ಟಿಸುವಳಂತೆ ಮೈದಾನದ ತುಂಬ ದೃಷ್ಟಿಬೀರಿದಳು. ಅಟ್ಟಣೆಯ ಮೇಲಿದ್ದ ನೀರಿನ ಹೊಂಡದಲ್ಲಿ ನಡೆದು ನೀರಿಗೆ ದೀವಟಿಗೆಯನ್ನು ಸ್ಪರ್ಶಿಸಿದಾಗ, ಒಳಗಿದ್ದ ಒಲಿಂಪಿಕ್ ಕರಂಡಕ ಹೊತ್ತಿ ಮೇಲೆದ್ದಿತು. ಕ್ಯಾಥಿಯನ್ನು ಬೆಂಕಿಯುಂಗುರದಲ್ಲಿ ಆವರಿಸಿದ್ದ ಕರಂಡ ಏಕಕಾಲಕ್ಕೆ ಬೆಂಕಿಯನ್ನು ಪ್ರಜ್ವಲಿಸಿ, ನೀರನ್ನೂ ಸುರಿಸಿ ಕ್ರೀಡಾಂಗಣದ ಮೇಲೇರಿ ಅಲ್ಲಿ ಸಜ್ಜಾಗಿದ್ದ ಸ್ತಂಭದ ಮೇಲೆ ಕುಳಿತಿತು. ಕ್ರೀಡಾಂಗಣದ ಬೆಳಕಲ್ಲಿ ಕ್ಯಾಥಿಫ್ರೀಮನ್ ತನ್ನ ಜನಾಂಗಕ್ಕೆ ಸಹಜವಾಗಿ ದಕ್ಕಬೇಕಿದ್ದ ಹಕ್ಕನ್ನು ಹೆಮ್ಮೆಯಿಂದ ಪ್ರದರ್ಶಿಸಿದ್ದು ಜಗತ್ತಿನ ಅರಿವಿಗೆ ಬಂತು.

ಒಲಿಂಪಿಕ್ ಇತಿಹಾಸದಲ್ಲಿ ಮೊದಲಬಾರಿಗೆ ಅತಿಥೇಯ ರಾಷ್ಟ್ರದ ನೀತಿಗಳ ವಿರುದ್ಧ ಪ್ರತಿಭಟಿಸಿ ಹಕ್ಕು ಸ್ಥಾಪಿಸಿದ ಮೊದಲ ಸ್ಪರ್ಧಿ ಕ್ಯಾಥಿ ಫ್ರೀಮನ್. ಈ ಸಾಧನೆಯ ಮಹತ್ವವನ್ನು ಅರಿಯಬೇಕಾದರೆ ಆಸ್ಟ್ರೇಲಿಯಾದ ಇತಿಹಾಸವನ್ನೂ ಸ್ವಲ್ಪ ಅರಿಯಬೇಕು.

ಹಿಂದೂ ಮಹಾಸಾಗರ ಮತ್ತು ಶಾಂತಿ ಸಾಗರದಲ್ಲಿ ಸುಮಾರು ಎಂಬತ್ತು ಲಕ್ಷ ಕಿ.ಮೀ. ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಆಸ್ಟ್ರೇಲಿಯಾ ಒಂದು ಮಹಾನ್‌ದ್ವೀಪ. ಅದು ಯುರೋಪಿಯನ್ನರ ವಸಾಹತುವಾಗುವ ಮುನ್ನ ಅಲ್ಲಿದ್ದವರು ಕೇವಲ ಮೂಲನಿವಾಸಿಗಳು. ಅವರು ಸರಿಸುಮಾರು ಐದುನೂರಕ್ಕೂ ಹೆಚ್ಚಿನ ಬುಡಕಟ್ಟುಗಳಿಗೆ ಸೇರಿದವರಾಗಿದ್ದರು. ಭಿನ್ನ ಭಿನ್ನ ನೈಸರ್ಗಿಕ ವಾತಾವರಣದಲ್ಲಿ ತಮ್ಮದೇ ಆದ ಪ್ರತ್ಯೇಕ ಜೀವನವಿಧಾನ, ಸಂಸ್ಕೃತಿ ಮತ್ತು ಧರ್ಮಗಳನ್ನು ರೂಢಿಸಿ ಕೊಂಡಿದ್ದ ವಿಶಿಷ್ಟ ಬುಡಕಟ್ಟುಗಳವು. ಹಲವಾರು ಶತಮಾನಗಳ ಕಾಲ ಹೀಗೆ ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡ ಇವರಿಗಿದ್ದಿದ್ದು ಹತ್ತಿರದ ಇಂಡೋನೀಶಿಯಾದ ಜನರ ಸಂಪರ್ಕ ಮಾತ್ರ. ಆದರೆ 1788ರಲ್ಲಿ ಬ್ರಿಟನ್‌ನ ಹಡಗೊಂದು 700 ಜನ. ಖೈದಿಗಳನ್ನು ಆಸ್ಟ್ರೇಲಿಯಾಗೆ ಕರೆತಂದು ನೆಲೆಸಲಾರಂಭಿಸಿದಾಗ ಮೂಲವಾಸಿಗಳ ಬದುಕು ಅಸ್ತವ್ಯಸ್ತವಾಯಿತು. ಇತರೆ ದೇಶದ ಜನರ ಆಚಾರವಿಚಾರಗಳನ್ನು ಅರಿಯದ ಈ ಮುಗ್ಧರನ್ನು ಬ್ರಿಟಿಷರು 'ಅನಾಗರಿಕರೆಂದು' ಘೋಷಿಸಿ ಅವರನ್ನು ನಾಗರೀಕತೆಯ ಏಕ ಎರಕಕ್ಕೆ ತರುವ ಕಾರ್ಯಕ್ಕೆ ಕೈಹಾಕಿದರು. ಸರಳವಾಗಿ ಹೇಳುವುದಾದರೆ ಯುರೋಪೀಕರಣ. ಮತಾಂತರ, ಒತ್ತಾಯ ವಿಧಾನದ ಮೂಲಕ ಅವರ ಸಂಸ್ಕೃತಿ ಭಾಷೆ ಮತ್ತು ಆಚಾರಗಳನ್ನು ಬ್ರಿಟಿಷರು ಹತ್ತಿಕ್ಕಿದ್ದರು. ಅವರ ಭೂಮಿಯನ್ನೇ ವಶಪಡಿಸಿಕೊಂಡು ಕೂಲಿಯಾಳನ್ನಾಗಿ ಮಾಡಿಕೊಂಡರು. ಅದು ಒಂದು ಜನಾಂಗದ ಶತಶತಮಾನಗಳ ಇತಿಹಾಸ, ಸಂಸ್ಕೃತಿಯ ಮೇಲೆ ನಡೆದ ಘೋರ ಅತ್ಯಾಚಾರ. ಅಲ್ಲದೆ ಯುರೋಪಿಯನ್ನರು ಹತ್ತಿಸಿದ ಬಗೆಬಗೆಯ ರೋಗಗಳಿಗೂ ಬಲಿಯಾದ ಆ ಜನಾಂಗ ಸಂಪೂರ್ಣ ನಿರ್ಮೂಲ ವಾಗುವ ಸ್ಥಿತಿ ಬಂತು.

ಆದರೂ ತಮ್ಮ ಬೇರುಗಳನ್ನೇ ಕಳೆದುಕೊಂಡು ತಮ್ಮ ತಮ್ಮಲ್ಲೇ ಸಂಕರಗೊಂಡು ಸ್ವಲ್ಪಮಟ್ಟಿಗೆ ಮೂಲಗುಣಗಳನ್ನು ಉಳಿಸಿಕೊಂಡ ಗುಂಪುಗಳು ಕೊನೆಗೆ ಒಟ್ಟಾಗಿ ತಮ್ಮ ಸಹಜ ಹಕ್ಕುಗಳಿಗೆ ಒತ್ತಾಯ ಮಾಡುವ ದುಸ್ಥಿತಿ ಬಂತು. 1960ರ ವರೆಗೆ ಅವರಿಗೆ ಪೌರಹಕ್ಕು, ಮತದಾನದ ಹಕ್ಕು ಇರಲಿಲ್ಲವೆಂದ ಮೇಲೆ ಅವರ ಅಸಹಾಯಕತೆಯನ್ನು ಊಹಿಸಬಹುದು.

ಇಂಥ ಸಂದಿಗ್ಧ ಜನಾಂಗದಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ಮ್ಯಾಕೆಯಲ್ಲಿ ಹುಟ್ಟಿದ ಕ್ಯಾಥಿಫ್ರೀಮನ್ (1973) ಎಂಟು ವರ್ಷದವಳಿರುವಾಗಲೆ ಅಥ್ಲೆಟಿಕ್ಸ್ ಕಡೆಗೆ

ಆಕರ್ಷಿತಗೊಂಡಳು. ತನ್ನ ಜನಾಂಗದ ಅಸಹಾಯಕ ಪರಿಸ್ಥಿತಿಯನ್ನು ನೋಡುತ್ತಲೇ ಬೆಳೆದ ಫ್ರೀಮನ್ ಹದಿನೈದನೆಯ ವಯಸ್ಸಿನಲ್ಲಿ ಅಥ್ಲೆಟಿಕ್ ಭದುಕನ್ನು ಬಹಳ ಗಂಭೀರವಾಗಿ ಪರಿಗಣಿಸಿದಳು. ಸಮೀಪ ಓಟ, ಹರ್ಡಲ್ಸ್ ಮತ್ತು ಜಂಪ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾ ಬಹುಬೇಗನೇ ಆಯ್ಕೆಗಾರರ ಗಮನ ಸೆಳೆದು ತನ್ನ ಹದಿನೇಳನೇ ವಯಸ್ಸಿಗೆ ಆಕ್ಲೆಂಡ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕೂಟ(1990)ದಲ್ಲಿ ಮೊದಲ ಬಾರಿಗೆ ಆಸ್ಟ್ರೇಲಿಯಾವನ್ನು ಪ್ರತಿನಿಧಿಸಿದಳು. 100ಮೀ. ಸ್ಪರ್ಧೆಯಲ್ಲಿ ಪ್ರವೇಶ ಪಡೆಯದೆ ವಿವಾದ ಹುಟ್ಟುಹಾಕಿದ ಕ್ಯಾಥಿ 4x100ಮೀ. ರಿಲೇ ತಂಡದಲ್ಲಿ ಸ್ಥಾನ ಪಡೆದು ಮೊದಲ ಬಾರಿಗೆ ಅಂತಾರಾಷ್ಟ್ರೀಯ ಚಿನ್ನದ ಪದಕ ಪಡೆದಳು.

ಈ ಚಿನ್ನದ ಬಾಲೆಯ ಬಾಲ್ಯದಲ್ಲೊಂದು ಎದೆ ನಡುಗಿಸುವ ಆಘಾತ ಬಂದೆರಗಿತ್ತು. ಆಕೆಯ ಕುಟುಂಬಕ್ಕೆ ಪರಿಚಿತನಾದವನೇ ಒಬ್ಬ, ಕ್ಯಾಥಿ ಹನ್ನೊಂದು ವರ್ಷದವಳಿದ್ದಾಗ ಅವಳ ಮೇಲೆ ಲೈಂಗಿಕ ಅತ್ಯಾಚಾರ ನಡೆಸಿಬಿಟ್ಟ. ಯಾವುದೇ ಬಾಲಕಿಯ ಬಾಳು ಛಿದ್ರವಾಗಿರಬಹುದಾದಂಥ, ಈ ಆಘಾತವನ್ನು ಕ್ಯಾಥಿ ದಿಟ್ಟತನದಿಂದ ಎದುರಿಸಿದಳು ಎಂಬುದೇ ವಿಶೇಷ. ಆ ದಾರುಣ ಅನುಭವವನ್ನು ಅರಗಿಸಿಕೊಂಡು ಬೆಳೆದ ಕ್ಯಾಥಿ ಮುಂದೊಮ್ಮೆ ಆ ಘಟನೆಯನ್ನು ಬಹಿರಂಗಪಡಿಸಿದಳು ಕೂಡ : "ನಾನು ಇದನ್ನು ನನಗಾಗಿ ಹೇಳುತ್ತಿಲ್ಲ. ಇಂಥದೇ 'ಅತ್ಯಾಚಾರಕ್ಕೊಳಗಾಗುವ ಬಾಲಕಿಯರಿಗೆ ಸ್ಥೈರ್ಯ ತುಂಬಲು ಹೇಳುತ್ತಿದ್ದೇನೆ. ಇಂಥ ಆಘಾತಗಳಾದರೆ, ಭಯಪಡಬೇಡಿ. ಅದಕ್ಕೆ ನೀವು ಕಾರಣರಲ್ಲ. ನಿಮ್ಮ ತಂದೆ ತಾಯಿಗಳಿಗೆ ಹೇಳಿ. ತಂದೆತಾಯಿಗಳು ತಮ್ಮ ಮಕ್ಕಳಿಗೆ ಆಗಬಹುದಾದ ಮಾನಸಿಕ ಅಪಾಯವನ್ನು ತಪ್ಪಿಸಲು ಅವರಿಗೆ ನೆರವಾಗಬೇಕು' ಎಂದು ಸ್ಥೈರಣೆಯಿಂದ ನುಡಿದಳು.

1992ರ ಬಾರ್ಸಿಲೋನ ಒಲಿಂಪಿಕ್ ತಂಡಕ್ಕೆ ಆಯ್ಕೆಯಾದಾಗ ಅವಳು ಆಸ್ಟ್ರೇಲಿಯಾ ತಂಡವನ್ನು ಪ್ರತಿನಿಧಿಸಿದ ಮೊದಲ ಮೂಲನಿವಾಸಿ ಕ್ರೀಡಾಪಟುವಾದಳು. ಆದರೆ ಆ ಕೂಟದಲ್ಲಿ ಅವಳಿಗೆ ಪದಕ ಬರಲಿಲ್ಲ. ಆದರೆ ಎರಡು ವರ್ಷಗಳ ತರುವಾಯ ಕೆನಡಾದಲ್ಲಿ ನಡೆದ ಕಾಮನ್‌ವೆಲ್ತ್ ಕೂಟದಲ್ಲಿ (1974) ಫ್ರೀಮನ್ 200 ಮತ್ತು 400 ಮೀ. ಓಟದಲ್ಲಿ ತನ್ನ ಪ್ರತಿಭೆಯನ್ನು ತೋರಿಸಿದಳು. ಅಷ್ಟೇ ಅಲ್ಲದೆ ತನ್ನ ಮೂಲನಿವಾಸಿಗಳ ಹಸಿರು, ಕೆಂಪು, ಹಳದಿ ಬಣ್ಣದ ಧ್ವಜವನ್ನು ಮೈದಾನದ ತುಂಬಾ ಹೊದ್ದು ಓಡಾಡಿ ಆಸ್ಟ್ರೇಲಿಯಾದ ಅಧಿಕಾರಿಗಳಿಗೆ ಮೊದಲ ಆಘಾತ ನೀಡಿದಳು.

ಅಧಿಕಾರಿಗಳ ತೀವ್ರ ವಿರೋಧವನ್ನು ಲೆಕ್ಕಿಸದೆ ಫ್ರೀಮನ್ ತನ್ನ ನಿಲುವನ್ನು ಗಟ್ಟಿ ದನಿಯಲ್ಲಿ ಸಮರ್ಥಿಸಿಕೊಂಡಳು. ತಾನು ಯಾವುದೇ ರಾಜಕೀಯ ಸಂದೇಶವನ್ನು ತೇಲಿಬಿಡುತ್ತಿಲ್ಲ ಎಂದು ಸ್ಪಷ್ಟಪಡಿಸಿದಳು. "ನಾನು ಯಾರು, ನಾನು ಎಲ್ಲಿಂದ ಬಂದಿರುವೆ ಎಂಬ ಬಗ್ಗೆ ನನಗೆ ಹೆಮ್ಮೆಯಿದೆ. ಅದನ್ನು ಜನರಿಗೆ ತೋರಿಸಲು ನಾನು ಹಾಗೆ ಮಾಡಿದೆ. ಒಬ್ಬ ಮೂಲನಿವಾಸಿಯಾಗಿ ನಾನು ಎಲ್ಲರಂತೆಯೇ ನನಗೆ ಕನಸುಗಳನ್ನು ಕಾಣುವ ಮತ್ತು ಗುರಿಗಳನ್ನು ಇಟ್ಟುಕೊಳ್ಳುವ ಹಕ್ಕಿದೆ" ಎಂದು ಸಂದರ್ಶನವೊಂದರಲ್ಲಿ ಪ್ರತಿಪಾದಿಸಿದಳು.

"ನಮ್ಮ ಜನಾಂಗವನ್ನು ಜಗತ್ತಿನ ಇತರೆ ಅಲ್ಪಸಂಖ್ಯಾತರೊಡನೆ ಹೋಲಿಸಬೇಡಿ. ಇದು ನಮ್ಮ ಜನ್ಮಭೂಮಿ. ಆದರೆ ನಾವೇ ಇಲ್ಲಿ ಅಜ್ಞಾತರು. ಜಗತ್ತಿನ ಇತರೆ ಅಲ್ಪಸಂಖ್ಯಾತರ ರೀತಿಯೂ ನಮ್ಮ ಪ್ರಗತಿಯಾಗಿಲ್ಲ. ನಾವು 'ಕಳೆದುಹೋದ ಪೀಳಿಗೆ'ಯವರು. ನಮ್ಮ ಸೋದರ-ಸೋದರಿಯರಿಂದ ಬೇರ್ಪಟ್ಟವರು ನಾವು" ಎಂದು ಫ್ರೀಮನ್ ದನಿಹೀನ ಮೂಲನಿವಾಸಿಗಳ ಹಕ್ಕನ್ನು ಗಟ್ಟಿದನಿಯಲ್ಲೇ ಎತ್ತಿಹೇಳತೊಡಗಿದಳು.

ಅವಳ ವಾದಕ್ಕೂ ಕಾರಣವಿದೆ. ತಮ್ಮ ಹೊಲ ಮತ್ತು ಕಾರ್ಖಾನೆಗಳಲ್ಲಿ ದುಡಿಯಲು ಬಿಳಿಯರು ಮೂಲನಿವಾಸಿಗಳ ಮಕ್ಕಳನ್ನು ತಂದೆತಾಯಿಯರಿಂದ ಬೇರ್ಪಡಿಸಿದರು. ತಮ್ಮ ಧರ್ಮ, ಭಾಷೆಗಳನ್ನು ಕಲಿಸಿ, ಸಮಾಜದ ಮುಖ್ಯವಾಹಿನಿಗೆ ತರುವ ಮಾನವೀಯ ಕಾರ್ಯದ ನೆಪದಲ್ಲಿ ಅವರ ಬೇರನ್ನೇ ಕತ್ತರಿಸಿದರು. ಹೀಗೆ ತಂದೆತಾಯಿಗಳಿಂದ ಬೇರ್ಪಟ್ಟ ಅನೇಕ ಪೀಳಿಗೆಗಳು ಜನ ಯಾವ ವರ್ಗಕ್ಕೂ ಸೇರದೆ "ಕಳೆದುಹೋದ ಪೀಳಿಗೆ" (Stolen generation) ಎಂದು ಕರೆಸಿಕೊಂಡು ಅನಾಮಧೇಯರಾದರು. ಬಿಳಿಯರು ನಾಶ ಮಾಡಿದ ಈ ಪೀಳಿಗೆಯ ಬಗ್ಗೆ ಫ್ರೀಮನ್ ಮಾತಾಡುತ್ತಿದ್ದಾಳೆ. ಇದೀಗ ಆ ಬಗ್ಗೆ ರಾಷ್ಟ್ರೀಯ ವಿಚಾರಣಾ ಸಮಿತಿಯೊಂದನ್ನು ರಚಿಸಿ ಕಳೆದುಹೋದ ಪೀಳಿಗೆಯನ್ನು ಅವರ ಸಂಬಂಧಿಸಿದ ಬೇರುಗಳಿಗೆ ತಲುಪಿಸುವ ಕಾರ್ಯವನ್ನು ಆಸ್ಟ್ರೇಲಿಯಾದ ಸರ್ಕಾರ ಕೈಗೆತ್ತಿಕೊಂಡಿದೆ.

ತನ್ನ ಜನಾಂಗದ ಬಗ್ಗೆ ಅಪಾರ ಪ್ರೀತಿಯಿರುವ ಕ್ಯಾಥಿ ಫ್ರೀಮನ್ ರಾಜಕಾರಣಿಯಲ್ಲ. ಅವಳು ಮೊದಲು ಓಟಗಾರ್ತಿ. ಆಟ ಅವಳ ಪ್ರಿಯ ವೃತ್ತಿ. ತನ್ನ ಆಟದ ಪಥದಲ್ಲಿ ದಾಪುಗಾಲಿಟ್ಟು ಎಲ್ಲರಿಗಿಂತ ಮೊದಲು ಗುರಿಮುಟ್ಟಿದಾಗಲೇ ತನ್ನ ಮಾತುಗಳಿಗೆ ಅರ್ಥಬರುವುದು; ಅದನ್ನು ಆಗಲೇ ಜಗತ್ತು ಆಲಿಸಲು ಎದ್ದು

ಕುಳಿತುಕೊಳ್ಳುವುದು ಎಂಬುದು ಅವಳಿಗೆ ಗೊತ್ತು. ಹಾಗಾಗಿ ಅವಳು ಆಟದ ಯಶಸ್ಸಿನ ಬೆನ್ನುಹತ್ತಿದ್ದಳು. 1995ರಲ್ಲಿ ನಡೆದ ವಿಶ್ವಚಾಂಪಿಯನ್‌ಶಿಪ್‌ನ 400 ಮೀ. ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದ ನಿರಾಶೆಯನ್ನು 1996ರಲ್ಲೇ ಅಳಿಸಿಹಾಕಿದ್ದು ಅವಳ ಸಂಕಲ್ಪಕ್ಕೆ ಸಾಕ್ಷಿಯಾಗಿದೆ.

1996ರಲ್ಲಿ ಆಕೆ 400ಮೀ. ಓಟವನ್ನು 50 ಸೆಕೆಂಡ್ ಒಳಗೇ ಪೂರ್ಣಗೊಳಿಸಿ, ಆ ಸಾಧನೆ ಮಾಡಿದ ಮೊದಲ ಆಟಗಾರ್ತಿಯೆನಿಸಿದಳು. ಅಲ್ಲಿಂದ ಒಲಿಂಪಿಕ್‌ನಲ್ಲಿ 400 ಮೀ. ಓಟದ ರಾಣಿಯೆನಿಸಿದ್ದ ಫ್ರಾನ್ಸಿನ ಮೇರಿ ಜೋಸ್ ಪೆರೆಕ್ ಅವಳ ಜೊತೆ ಸರಿಸಮಾನವಾಗಿ ಓಡಿ 48.63 ಸೆಕೆಂಡ್‌ಗಳಲ್ಲಿ ಓಟವನ್ನು ಮುಗಿಸಿದರೂ ಬೆಳ್ಳಿಪದಕ ಪಡೆಯಬೇಕಾಯಿತು. ಯಾಕೆಂದರೆ ಮೇರಿ ಪೆರೆಕ್ 48.25 ಸೆಕೆಂಡ್‌ಗಳಲ್ಲಿ ಸ್ಪರ್ಧೆ ಮುಗಿಸಿದ್ದಳು. ಆದರೆ ಅಟ್ಲಾಂಟಾ ನಂತರ ಕಾಯಿಲೆಯ ನೆಪದಿಂದ ಪೆರೆಕ್ ತಾತ್ಕಾಲಿಕವಾಗಿ ಓಟಕ್ಕೆ ವಿದಾಯ ಹೇಳಿದಾಗ ಕ್ಯಾಥಿ ವಿಜೃಂಭಿಸತೊಡಗಿದಳು. 1997 ಮತ್ತು 1999ರಲ್ಲಿ ನಡೆದ ವಿಶ್ವಚಾಂಪಿಯನ್‌ಶಿಪ್‌ನಲ್ಲಿ ಮೊದಲಬಾರಿಗೆ ಸತತವಾಗಿ ಚಿನ್ನ ಗೆದ್ದ ಖ್ಯಾತಿಗೆ ಕ್ಯಾಥಿ ಪಾತ್ರಳಾದಳು. 1997ರಲ್ಲಿ ಅಥೆನ್ಸ್‌ನಲ್ಲಿನಡೆದ ವಿಶ್ವಚಾಂಪಿಯನ್‌ಶಿಪ್‌ನಲ್ಲಿ ಕ್ಯಾಥಿ ಮತ್ತೆ ತನ್ನ ದೇಶದ ಮತ್ತು ಜನಾಂಗದ ಧ್ವಜಗಳನ್ನು ಭುಜದ ಮೇಲೆ ಹೊತ್ತು ಕ್ರೀಡಾಂಗಣದಲ್ಲಿ ಓಡಾಡಿದಳು. ಆಗಲೂ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರು. "ನಮ್ಮ ಸರ್ಕಾರದಿಂದ ನನ್ನ ಜನಾಂಗಕ್ಕೆ ಅನ್ಯಾಯವಾಗಿದೆ. ಆ ಅನ್ಯಾಯವನ್ನು ಒಪ್ಪಿಕೊಂಡು ಅದು ಮೂಲನಿವಾಸಿಗಳ ಕ್ಷಮೆ ಯಾಚಿಸಿಲ್ಲ" ಎಂದು ಕ್ಯಾಥಿ ಗುಡುಗಿದಳು. ಕ್ಯಾಥಿಯ ವರ್ತನೆಗೆ ಅಧಿಕಾರಿಗಳು ಆಕ್ಷೇಪಿಸಿದರೂ ಅವಳ ಜನಪ್ರಿಯತೆ ಕುಗ್ಗಲಿಲ್ಲ. ಆಕೆ ಗೆಲ್ಲುವವರೆಗೆ ಅವಳ ದನಿಯನ್ನು ಹತ್ತಿಕ್ಕುವುದು ಸಾಧ್ಯವಿಲ್ಲ ಎನ್ನುವುದು ಸರ್ಕಾರಕ್ಕೆ, ಅಧಿಕಾರಿಗಳಿಗೆ ಈಗ ಮನವರಿಕೆಯಾಗಿದೆ.

ಸಿಡ್ನಿ ಒಲಿಂಪಿಕ್ ಕೂಟದಲ್ಲಿ ಒಲಿಂಪಿಕ್ ಜ್ಯೋತಿ ಕರಂಡವನ್ನು ಹೊತ್ತಿಸುವ ಗೌರವ ಅವಳಿಗೆ ದಕ್ಕಿದ್ದು ಈ ಹೋರಾಟದ ಫಲ. ಆಕೆ ಈ ಜ್ಯೋತಿಯನ್ನು ಹಿಡಿದು ತನ್ನ ಪುರಾತನ ಘನತೆಯನ್ನು ಎತ್ತಿಹಿಡಿದಳು.

ಅಟ್ಲಾಂಟಾದಲ್ಲಿ ನಡೆದ ರೀತಿಯಲ್ಲಿಯೇ ಸಿಡ್ನಿಯಲ್ಲೂ ಫ್ರಾನ್ಸ್‌ನ ಮೇರಿ ಜೋಸ್ ಪೆರೆಕ್-ಕ್ಯಾಥಿ ಫ್ರೀಮನ್ ಜೋಡಿಯ ಸಂಘರ್ಷ ನಡೆಯುವುದನ್ನು ಕಾತರದಿಂದ ನಿರೀಕ್ಷಿಸುತ್ತಿದ್ದವರಿಗೆ ನಿರಾಶೆಯಾಯಿತು. ಹೋಟೆಲ್‌ನಲ್ಲಿ ತನಗೆ ಬೆದರಿಕೆಯೊಡ್ಡಲಾಯಿತೆಂದು ಹೇಳಿ ಪೆರೆಕ್ ರಹಸ್ಯವಾಗಿ ಸಿಡ್ನಿಯಿಂದ ನಿರ್ಗಮಿಸಿದಳು. ಫ್ರೀಮನ್ ಸೋಲಬಹುದೆಂದು ಭಾವಿಸಿ ಕೆಲವು ಮೂಲನಿವಾಸಿಗಳು ಆಕೆಗೆ ಬೆದರಿಕೆಯೊಡ್ಡಿರಬಹುದೆಂದು ಗುಸುಗುಸು ಆರಂಭವಾಯಿತು. ಆದರೆ ಹೋಟೆಲ್ ಮೂಲಗಳು ಅದನ್ನು ನಿರಾಕರಿಸಿದವು. ಸೋಲನ್ನು ಸ್ವೀಕರಿಸುವ ಸ್ಥೈರ್ಯವಿಲ್ಲದ ಪೆರೆಕ್ ನೆಪವೊಡ್ಡಿ ಸ್ಪರ್ಧೆಯಿಂದ ಹಿಂದೆಗೆದಳೆಂದು ಮತ್ತೊಂದು ಮೂಲ ಆರೋಪಿಸಿತು. ಆದರೆ ಸತ್ಯ ಏನೆಂದು ತಿಳಿಯಲಿಲ್ಲ. ಫ್ರೀಮನ್ ಮಾತ್ರ 400 ಮೀ. ಓಟದಲ್ಲಿ ಸ್ವರ್ಣಪದಕ ಗಳಿಸಿ ತನ್ನ ಜನಾಂಗದ ಹೃದಯಗಳು ಹಿಗ್ಗುವಂತೆ ಮಾಡಿದಳು. ತನ್ನ ವಾದಕ್ಕೆ ಮತ್ತಷ್ಟು ಬಲ ಬರುವಂತೆ ನೋಡಿಕೊಂಡಳು.

ಒಂದು ಉಪೇಕ್ಷಿತ ಜನಕ್ಕೆ ದನಿಕೊಟ್ಟ ಕ್ಯಾಥಿ ಫ್ರೀಮನ್ ರಾಜಕೀಯ ಘೋಷಣೆಗಳನ್ನು ಕೂಗುವುದಿಲ್ಲ. ಆದರೆ ಅವಳ ನಿಲುವು ರಾಜಕೀಯ ಪ್ರಭುಗಳನ್ನು ಅಲ್ಲಾಡಿಸಿದೆ. ರಾಜಕೀಯ ವ್ಯಕ್ತಿಯಾಗದಿದ್ದರೂ, ಸಾಮಾಜಿಕ ಅನ್ಯಾಯವನ್ನು ಸರಿಪಡಿಸಲು ಕ್ರೀಡಾವಿಜಯ ಪ್ರಭಾವ ಬೀರಬಲ್ಲದು ಎಂಬ ಸತ್ಯವನ್ನು ಫ್ರೀಮನ್ ಗೆಲುವು ತೋರಿಸಿಕೊಟ್ಟಿದೆ. ಆಟದ ವಿಜಯ ತಂದುಕೊಡುವ ಸಂಭ್ರಮದ ಕ್ಷಣಗಳು ಈಗ ಫ್ರೀಮನ್‌ನಿಂದಾಗಿ ಹೊಸ ಆಯಾಮವನ್ನೇ ಪಡೆದಿವೆ.

ಕೃಪೆ: 'ಭುವನದ ಬೆಡಗು' ಕೆ. ಪುಟ್ಟಸ್ವಾಮಿ

ಮಹಿಳೆಯರಿಗೆ ಸಂಬಂಧಪಟ್ಟ, ಹೆಚ್ಚು ಪ್ರಸ್ತುತವಾದ ವಿಷಯಗಳನ್ನು ಕುರಿತು ಮಾನಸ ಪತ್ರಿಕೆಯ ಮೂಲಕ ಓದುಗರೊಂದಿಗೆ ಸಂವಾದ ನಡೆಸುವ ಯೋಜನೆಯನ್ನು ಪತ್ರಿಕೆ ರೂಪಿಸಿದೆ. ಮಹಿಳೆಯರ ಬದುಕಿಗೆ ನೇರವಾಗಿ ಸಂಬಂಧಿಸಿದ ದೈನಂದಿನ ಸಮಸ್ಯೆಗಳನ್ನು ಸೈದ್ಧಾಂತಿಕ ನೆಲೆಯನ್ನು ರೂಪಿಸುವುದು ಈ ಆಲೋಚನೆಯ ಉದ್ದೇಶ. ಈ ಬಾರಿ ಚರ್ಚೆ ಆರಿಸಿಕೊಂಡ ವಿಷಯ "ವಿವಾಹ ಮಹಿಳೆಗೆ ಭದ್ರತೆಯನ್ನು ನೀಡುತ್ತಿದೆಯೆ?" ಈ ವಿಷಯ ಕುರಿತು ಓದುಗರು ತಮ್ಮ ವಿಚಾರಗಳನ್ನು [ನಿಮ್ಮ ಕೈಬರಹದಲ್ಲಿ ಮೂರು ಪುಟಗಳಿಗೆ ಮೀರದಂತೆ] ಬರೆದು ಕಳಿಸುವುದರ ಮೂಲಕ ಚರ್ಚೆಯಲ್ಲಿ ಭಾಗವಹಿಸಿ, ಅರ್ಥಪೂರ್ಣಗೊಳಿಸಬೇಕೆಂದು ಕೋರುತ್ತೇವೆ.

-ಸಂ. ಮಂಡಳಿ

ಭೂಮಿಗಾಥ

ಡಾ. ವಸುಂಧರಾ ಭೂಪತಿ, ಬೆಂಗಳೂರು

"ಡಾಕ್ಟ್ರೇ ನನಗೆ ಮದುವೆಯಾಗಿ ಐದು ವರ್ಷವಾಯಿತು. ಮಕ್ಕಳಾಗಿಲ್ಲ, ಅದಕ್ಕೆ ಚಿಕಿತ್ಸೆಗಾಗಿ ಬಂದಿದ್ದೇನೆ" ಎಂದು ಅತ್ಯಂತ ಸಂಕೋಚದಿಂದ ಮೆಲುನುಡಿಯಲ್ಲಿ ನುಡಿದಳಾಕೆ.

"ಒಬ್ಬರೇ ಬಂದಿದ್ದೀರಲ್ಲ. ನಿಮ್ಮ ಯಜಮಾನರೆಲ್ಲಿ?"

"ಇಲ್ಲ ಡಾಕ್ಟ್ರೇ, ಅವರು ಬರೋದಿಲ್ಲ ಅಂತಾರೆ. ಈ ಮುಂಚೆಯೂ ಒಂದಿಬ್ಬರು ಡಾಕ್ಟ್ರಗಳ ಬಳಿ ಚಿಕಿತ್ಸೆ ತೆಗೆದುಕೊಂಡಿದ್ದೇನೆ. ನನ್ನ ಯಜಮಾನರು ಮಾತ್ರ ಬರೋದೇ ಇಲ್ಲ. ರಕ್ತ ಪರೀಕ್ಷೆ ಹಾಗೂ ಸ್ಕ್ಯಾನಿಂಗ್ ಎರಡುಗಳನ್ನೆಲ್ಲ ತಂದಿದ್ದೇನೆ. ಇವನ್ನೆಲ್ಲ ನೋಡಿ ನನಗೆ ಚಿಕಿತ್ಸೆ ಕೊಟ್ಟು ಹೇಗಾದ್ರೂ ಒಂದು ಮಗುವಾಗುವಂತೆ ಮಾಡಿ. ಎಲ್ಲಿ ಹೋದರೂ ನಿಮಗೆಷ್ಟು ಮಕ್ಕಳು? ಎಂದೇ ಕೇಳುತ್ತಾರೆ. ನನ್ನ ಜೊತೆಗೆ ಮದುವೆಯಾದವರಿಗೆಲ್ಲ ಮಕ್ಕಳಾಗಿದೆ. ನನ್ನ ಅತ್ತೆ ಅಂತೂ ಪ್ರತಿನಿತ್ಯ ಏನಾದ್ರೂ ಬೈಯುತ್ತಲೇ ಇರುತ್ತಾರೆ. ಹೊಟ್ಟೆ ತುಂಬ ಊಟ ಮಾಡುವುದಕ್ಕೂ ಬಿಡುವುದಿಲ್ಲ. ನನ್ನ ಗಂಡನಿಗೆ ಇನ್ನೊಂದು ಮದುವೆ ಮಾಡಬೇಕೆಂದು ಕೂಡ ಯೋಚಿಸಿದ್ದಾರೆ. ನಾನು ಏನ್ಮಾಡಲಿ ಹೇಳಿ ಡಾಕ್ಟ್ರೇ?"

ಅವಳು ಹೇಳುವುದನ್ನೆಲ್ಲ ಕೇಳುತ್ತಿದ್ದಂತೆ ಇದು ಸಮಸ್ಯೆಯ ಒಂದು ಮುಖ ಮಾತ್ರ ಅನ್ನಿಸಿ ಅವಳು ತಂದ ರಿಪೋರ್ಟ್‌ಗಳನ್ನು ಪರಿಶೀಲಿಸಿದಾಗ ಅವಳಲ್ಲಿ ಯಾವುದೇ ತೊಂದರೆಯಿಲ್ಲದಿರುವುದು ತಿಳಿದುಬಂದಿತು.

"ನೋಡಮ್ಮ, ನಿನ್ನಲ್ಲಿ ಯಾವುದೇ ರೀತಿಯ ತೊಂದರೆಯಿಲ್ಲ. ನಿನ್ನ ಗಂಡನನ್ನು ಕರೆದುಕೊಂಡು ಬಾ. ಮಕ್ಕಳಾಗುವುದು ಹೆಣ್ಣಿನಿಂದ ಮಾತ್ರ ಹೇಗೆ ಸಾಧ್ಯ? ಎರಡೂ ಕೈ ತಟ್ಟಿದರೇ ಚಪ್ಪಾಳೆಯಾಗೋದು ಅಲ್ವೆ. ನೀನು ಇದಕ್ಕೆಲ್ಲ ಬೇಸರ ಮಾಡಿಕೊಳ್ಳಬೇಡ".

"ನೀವೇನೋ ಬೇಸರ ಮಾಡಿಕೊಳ್ಳಬೇಡಿ ಅಂತೀರಿ ಡಾಕ್ಟ್ರೆ. ಪ್ರತಿ ಸಲ ನಾನು ಮುಟ್ಟಾದಾಗ ನನಗಾಗುವ ನಿರಾಶೆ ಅಷ್ಟಿಷ್ಟಲ್ಲ, ಗಂಡನ ಹಾಗೂ ಅತ್ತೆಯ ಚುಚ್ಚು ಮಾತುಗಳಿಗೆ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳಲೇ ಎನಿಸುತ್ತದೆ."

"ಛೆ! ಹಾಗೆಲ್ಲಾದರೂ ಮಾಡಿಕೊಂಡೀಯ. ಆತ್ಮಹತ್ಯೆ ಹೇಡಿಗಳ ಕೆಲಸ. ಜೀವನದಲ್ಲಿ ಬದುಕಿದ್ದು ಸಾಧಿಸಿ ತೋರಿಸಬೇಕೇ ಹೊರತು ಹೀಗೆಲ್ಲ ಯೋಚಿಸುವುದು ಸಲ್ಲದು. ಮೊದಲು ನಿನ್ನ ಗಂಡನನ್ನು ಚಿಕಿತ್ಸೆಗೆ ಕರೆದುಕೊಂಡು ಬಾ". ನಂತರ ಬಹಳ ದಿನಗಳ ಮೇಲೆ ಅವಳು ಬರದೇ ಇದ್ದುದರಿಂದ ಆ ವಿಷಯವನ್ನೇ ನಾನು ಮರೆತಿದ್ದೆ. ಒಂದು ದಿನ ಕ್ಲಿನಿಕ್ ಮುಗಿಸಿಕೊಂಡು ಮನೆಗೆ ಹೊರಡುವ ತರಾತುರಿಯಲ್ಲಿದ್ದಾಗ ಅವಳು ಗಂಡನೊಂದಿಗೆ ಬಂದಳು.

"ಬನ್ನಿ, ಕುಳಿತುಕೊಳ್ಳಿ, ಹೇಗಿದ್ದೀರಿ?"

"ಚೆನ್ನಾಗಿದ್ದೀನಿ ಡಾಕ್ಟ್ರೇ, ನೀವು ಹೇಳಿದಂತೆ ಇವರನ್ನು ಕರೆದುಕೊಂಡು ಬಂದಿರುವೆ. ಇವರನ್ನು ಆಸ್ಪತ್ರೆಗೆ ಬರುವಂತೆ ಒಪ್ಪಿಸುವಷ್ಟರಲ್ಲಿ ಸಾಕಾಗಿ ಹೋಯಿತು" ಅವಳ ಮಾತು ಮುಗಿಯುತ್ತಿದ್ದಂತೆಯೇ ಅವಳ ಗಂಡ,

"ಅಲ್ಲ ಡಾಕ್ಟ್ರೇ, ನೀವೇ ನೋಡಿ ನಾನು ದೃಢಕಾಯನಾಗಿ ಆರೋಗ್ಯವಾಗಿದ್ದೇನೆ. ಕಷ್ಟಪಟ್ಟು ದುಡಿಯುತ್ತೇನೆ. ನನಗ್ಯಾವ ತರದ ಕಾಯಿಲೆಯೂ ಇಲ್ಲ. ನೀವು ಹೇಳಿದ್ರಿ ಅಂತ ಬಲವಂತವಾಗಿ ನನ್ನನ್ನು ಕರೆದುಕೊಂಡು ಬಂದಳು".

"ಹೌದು, ನಾನೇ ಹೇಳಿದ್ದೆ. ವಿದ್ಯಾವಂತರಾದ ನಿಮಗೆ ಮಕ್ಕಳು ಹೇಗೆ ಆಗುತ್ತವೆಂದು ಗೊತ್ತಿಲ್ಲವೆ? ಹೆಣ್ಣಿನ ಅಂಡಾಣು ಗಂಡಿನ ವೀರ್ಯಾಣುವಿನೊಡನೆ ಗರ್ಭಾಶಯದಲ್ಲಿ ಸಂಯೋಗ ಹೊಂದಿದಾಗ ಗರ್ಭೋತ್ಪತ್ತಿಯಾಗುತ್ತದೆ. ಗರ್ಭ ಧರಿಸಲು ಇಬ್ಬರೂ ಜವಾಬ್ದಾರರು. ನಿಮ್ಮ ಪತ್ನಿಯಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲ. ಆದ್ದರಿಂದ ನೀವು ವೀರ್ಯ ಪರೀಕ್ಷೆ ಮಾಡಿಸಿಕೊಂಡು ಬಂದರೆ ನಂತರ ಚಿಕಿತ್ಸೆಯ ಬಗ್ಗೆ ಯೋಚಿಸಬಹುದು. ನಿಮಗೇನ ಕಾಯಿಲೆ ಇಲ್ಲದಿರಬಹುದು, ಆರೋಗ್ಯವಂತರಾಗಿರುವುದು ಎಲ್ಲವೂ ನಿಜವಾದರೂ ವೀರ್ಯ ಪರೀಕ್ಷೆಯಿಂದ ಮಾತ್ರವೇ ವೀರ್ಯಾಣುಗಳ ಉತ್ಪತ್ತಿ ಹಾಗೂ ಸಂಖ್ಯೆಯ ಬಗ್ಗೆ ತಿಳಿದುಕೊಳ್ಳಲು ಸಾಧ್ಯ. ಆದ್ದರಿಂದ ನೀವು ಸೆಮೆನ್ ಅನಾಲಿಸಿಸ್ ಮಾಡಿಸಿಕೊಂಡು ಬನ್ನಿ" ಎಂದೆ.

ಒಂದು ಕ್ಷಣ ಯೋಚಿಸಿದಂತೆ ಮಾಡಿ ನಂತರ ಆತ ತಲೆಯಾಡಿಸಿದ. ಒಂದು ವಾರದ ಬಳಿಕ ಇಬ್ಬರೂ ರಿಪೋರ್ಟ್

ನೊಂದಿಗೆ ಬಂದರು. ದುರದೃಷ್ಟವಶಾತ್ ಅವನ ವೀರ್ಯದಲ್ಲಿ ವೀರ್ಯಾಣುಗಳೇ ಇರಲಿಲ್ಲ. ಹೀಗಿರುವಾಗ ಅವನಿಗೆ ಮಕ್ಕಳಾಗಲು ಸಾಧ್ಯವೇ ಇಲ್ಲ. ಅಲ್ಪಸ್ವಲ್ಪ ವೀರ್ಯಾಣುಗಳಿದ್ದಲ್ಲಿ ಚಿಕಿತ್ಸೆಯಿಂದ ಸಂಖ್ಯೆ ಹೆಚ್ಚಿಸಬಹುದು. ಆದರೆ ಇವರ ವಿಷಯದಲ್ಲಿ ಅದೂ ಸಾಧ್ಯವಿಲ್ಲ. ಅವರಿಬ್ಬರೂ ಕಾತುರದಿಂದ ನನ್ನ ಮುಖವನ್ನೇ ನೋಡುತ್ತಿದ್ದರು. ಯಾವುದೋ ಆಸೆಯಿಂದ ನನ್ನ ಬಳಿಗೆ ಬಂದ ಅವರನ್ನು ನಿರಾಸೆಗೊಳಿಸುತ್ತೇನೋ ಅಂತ ಅನ್ನಿಸಿದರೂ ಸತ್ಯ ಎಷ್ಟೇ ಕಹಿಯಾಗಿದ್ದರೂ ಅವರಿಗೆ ತಿಳಿಸಲೇಬೇಕಿತ್ತು.

"ನೋಡಿ, ನೀವಿಬ್ಬರೂ ಧೈರ್ಯ ತಂದುಕೊಳ್ಳಲೇಬೇಕು. ನಿಮಗೆ ಮಕ್ಕಳಾಗುವುದಿಲ್ಲ. ಯಾವ ಚಿಕಿತ್ಸೆಯಿಂದಲೂ ಪ್ರಯೋಜನವಿಲ್ಲ. ಆದ್ದರಿಂದ ಚಿಕಿತ್ಸೆಯ ಬಗ್ಗೆ ಯೋಚನೆ ಮಾಡುವುದನ್ನು ಬಿಟ್ಟುಬಿಡಿ. ಯಾವುದಾದರೂ ಒಂದು ಅನಾಥ ಮಗುವನ್ನು ದತ್ತು ತೆಗೆದುಕೊಂಡು ಸುಖವಾಗಿ ಬಾಳಿ".

"ಎಷ್ಟೇ ಹಣ ಖರ್ಚಾದ್ರೂ ಪರವಾಗಿಲ್ಲ. ನಮಗೆ ಮಗು ಬೇಕು. ನನಗೆ ಮಕ್ಕಳೆಂದರೆ ತುಂಬ ಇಷ್ಟ" ಆತ ನುಡಿದ.

"ಎಷ್ಟೋ ಅನಾಥಮಕ್ಕಳಿವೆ. ಅವುಗಳಲ್ಲೊಂದನ್ನು ತಂದು ಸಾಕಿದರೆ ಮಗುವಿಗೂ ತಂದೆ ತಾಯಿ ಸಿಕ್ಕಂತಾಗುತ್ತದೆ. ನಿಮಗೂ ಮಗುವಿನಿಂದ ತೃಪ್ತಿ, ಸಂತೋಷ ಸಿಗುತ್ತದೆ. ಸುಮ್ಮನೆ ಡಾಕ್ಟರ್‌ಗಳ ಬಳಿ ಅಲೆದಾಡಿ ಹಣ, ಸಮಯ, ನೆಮ್ಮದಿ ಕಳೆದುಕೊಳ್ಳಬೇಡಿ. ಹಾ! ನಿಮ್ಮ ತಾಯಿಗೂ ತಿಳಿಸಿ, ಸುಮ್ಮನೇ ಸೊಸೆಯನ್ನು ಗೋಳು ಹುಯ್ದುಕೊಳ್ಳೋದು ಬೇಡ. ಮತ್ತೆ ಇನ್ನೊಂದು ಮದುವೆಯಾಗುವುದರ ಬಗ್ಗೆ ಯೋಚನೆ ಖಂಡಿತ ಸಲ್ಲದು. ಇನ್ನು ಹತ್ತು ಮದುವೆಯಾದರೂ ನಿಮಗೆ ಮಕ್ಕಳಾಗುವುದಿಲ್ಲವೆಂದು ತಿಳಿಸಿ".

ಅವನು ಸುಮ್ಮನೆ ತಲೆಕೆಳಗೆ ಹಾಕಿದ. ಹೆಂಡತಿಯೇ ಗಂಡನಿಗೆ ಧೈರ್ಯ ಹೇಳಿ ಕರೆದುಕೊಂಡು ಹೋದಳು. ಈ ತರಹದ ದಂಪತಿಗಳು ಬಹಳಷ್ಟು ಜನರಿದ್ದಾರೆ. ಗಂಡಸು ತನ್ನ ದೋಷವೇನೂ ಇಲ್ಲವೆಂದು ಎಲ್ಲವನ್ನೂ ಹೆಂಡತಿಯ ಮೇಲೆ ಹಾಕಿ ಅವಳನ್ನು ನಿಂದಿಸುತ್ತ ತಾನು ನಿಶ್ಚಿಂತೆಯಿಂದಿರುತ್ತಾನೆ. ಹೆಂಡತಿ ಮಾತ್ರ ತನ್ನ ಕುಟುಂಬದವರ ಹಾಗೂ ಸಮಾಜದ ಬಿರುನುಡಿಗಳಿಗೆ ಸಿಕ್ಕಿ ಒದ್ದಾಡುತ್ತಾಳೆ. ಮಕ್ಕಳಾಗದಿದ್ದರೆ ಹೆಣ್ಣನ್ನು ಮಾತ್ರ 'ಬಂಜೆ' ಎನ್ನುವರಲ್ಲ. ಗಂಡಸನ್ನು ಯಾಕೆ ಅಂತಹ ಯಾವ ಶಬ್ದದಿಂದಲೂ ಕರೆಯುವುದಿಲ್ಲ. ಹೇಗೆ ಗಂಡನನ್ನು ಪ್ರೀತಿ, ವಿಶ್ವಾಸ ಹಾಗೂ ಗೌರವದಿಂದ ಕಾಣುತ್ತಾಳೋ ಅದೇ ರೀತಿಯಾಗಿ ಗಂಡು ಏಕೆ ಹೆಣ್ಣನ್ನು ಸಮಾನವಾಗಿ ಕಂಡು ಅವಳ ವ್ಯಕ್ತಿತ್ವವನ್ನು ಗೌರವಿಸಲಾರ? ಎಷ್ಟಾದರೂ ನಮ್ಮದು ಪುರುಷಪ್ರಧಾನ ಸಮಾಜವಲ್ಲವೆ?

ಕೆಲವು ದಿನಗಳ ನಂತರ ಇಬ್ಬರೂ ಪುಟ್ಟ ಮಗುವೊಂದನ್ನು ಎತ್ತಿಕೊಂಡು 'ಸಿಹಿ' ಕೊಡಲು ಬಂದರು. ನನ್ನ ಸಲಹೆಯಂತೆ ಅನಾಥ ಮಗುವನ್ನು ದತ್ತು ತೆಗೆದುಕೊಂಡಿದ್ದರು. ಇಬ್ಬರೂ ಮಗುವಿನೊಂದಿಗೆ ಅನ್ಯೋನ್ಯತೆಯಿಂದ ಇರುವುದನ್ನು ಕಂಡು ನನ್ನ ಮನ ಹೂವಾಯಿತು. ಆ ಮಗು 'ಹೆಣ್ಣು' ಮಗುವೆಂಬುದು ಇನ್ನೂ ಸಂತಸದ ಸಂಗತಿ.

ಏಕೆ?

ಬಾಳೆಂಬ ಬೀದಿಯಲಿ, ಬಣ್ಣ
ಬಯಕೆಯು ಬೆನ್ನ ಮೇಲೆಯೇ ಬಂದು
ಬರೀ ಭ್ರಮೆಯೆಂದು ಬರಿದಾಗುವುದರೊಳಗೆ
ಬದುಕು ಬರಡಾಗಿ ಬೇಯುತಿದೆಯೇಕೆ ಈ ಹೆಣ್ಣಿಗೆ?

ಕುದಿದು ಕಾಯುತಲಿ,
ಕಾಯುತ್ತಲೇ ಕುಂದಿ,
ಕಪ್ಪು ಕೆಂಪುಗಳೆಲ್ಲ
ಕಾಣಲಿಲ್ಲವೇಕವಳ ಕಣ್ಣಿಗೆ?

ಪರಿಧಿಯ ಪ್ರಮಾಣಿಸದೆ,
ಪಾತ್ರವೇ ಪೂರ್ಣ ಸತ್ಯವೆಂದು
ಪರಿದು, ಪಿಡುಗಿನಲಿ
ಪೂರ್ಣ ಕಂಡಳಿವಳೇಕೆ?

ಕಷ್ಟ ಕೋಟಳೆಯ ಕೋಟೆಯಲ್ಲಿ
ಕುರುಡಾಗಿ ಕಂಗೆಟ್ಟು
ಕನಸಲ್ಲೇ ಕಷ್ಟ ಕಳೆದಳಲ್ಲ
ಈ ಕುರುಡಿಯೇಕೆ?

✍ ಮೈತ್ರಿ

ಅಮ್ಮನಿಗೆ

✍ ಸುಮತಿ

ಜಗತ್ತಿನಲ್ಲಿ ಎಲ್ಲರಿಗಿಂತ ಅತ್ಯಂತವಾಗಿ ನಾನು ಪ್ರೀತಿಸುವ ನನ್ನ 'ಅಮ್ಮ'......

ಯಾಕೋ ಏನೋ ಈ ನಡುವೆ ಅಮ್ಮ ನಿನ್ನ ನೆನಪಾದಾಗಲೆಲ್ಲ, ಅದೇ ಆ ಸಿನಿಮಾ ಹಾಡನ್ನ ತುಂಬಾ ಹಾಡ್ತಾ ಇರ್‍ತೀನಿ......"ನಾನೊಂದು ತೀರ.....ನೀನೊಂದು ತೀರ......" ಅಮ್ಮ ನನ್ನ ನಿನ್ನ ದಾರಿಗಳು ಎಷ್ಟೆಷ್ಟು ಬೇಡವೆಂದರೂ ಬೇರೆಯಾಗ್ತಾನೇ ಇದೆ. ಅದಕ್ಕೇ ಅನ್ಸುತ್ತೆ, ಈ ಹಾಡು ತುಂಬಾ ನೆನಪಿಗೆ ಬರೋದು. ಅಮ್ಮ ನನ್ನ ನಿನ್ನ ನಡೆ, ನುಡಿ, ಚಲನ ವಲನಗಳಲ್ಲೆಲ್ಲಾ ನನಗೆ ವ್ಯತ್ಯಾಸಗಳೇ ಕಂಡುಬರ್‍ತಿದೆ.

ಆಗ ನೀನು ತೋರಿಸ್ತಿದ್ದ ನೀಲಿ ಆಕಾಶ, ಚಂದ್ರತಾರೆಗಳು, ಚುಕ್ಕಿಗಳೆಲ್ಲ ಈಗ ಬರೀ ನೀಲಿ ಆಕಾಶ, ಚಂದ್ರ ತಾರೆಗಳು, ಚುಕ್ಕಿಗಳಂತೆ ಕಾಣದೆ, ಬರೀ ಬಚ್ಚ ಬಾಯಿಹೊತ್ತ ಮುಖದಂತೆ ಮೋಡಗಳು, ಆ ಬಚ್ಚ ಬಾಯಿಂದ ಬರುವ ಮಾತಿನಂತೆ ಮಳೆ, ಮನಸ್ಸಿನಲ್ಲಿ ಸುಯ್ ಎಂದು ಬಂದು ಹೋಗುವ ಜನಗಳಂತೆ ಏರೋಪ್ಲೇನ್‌ಗಳು, ಬಂದು ಹೋಗುವುದಷ್ಟೇ ಅಲ್ಲದೆ ಮನಸ್ಸಿಗೆ ನಾಟಿ, ಸೀಳುವಂತೆ ಹೇಳುವ ಮಾತುಗಳಂತೆ ಆಕಾಶವನ್ನೇ ಸೀಳಿಕೊಂಡು ಹೋಗುವ ರಾಕೆಟ್‌ಗಳಂತೆ ಕಾಣ್ತವೆ.....

ಅಮ್ಮ ನಿನ್ನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು, ಮಿಟುಕಾಡುತಿರುವೆ ನಾನು.....'ಹೌದಮ್ಮ ನನ್ನಂತೆಯೇ, ತನ್ನ ತಳಮಳಗಳನ್ನು ಮಾತನಾಡಲು, ಹೇಳಿಕೊಳ್ಳಲು, ತಮ್ಮ ತಮ್ಮ ತಾಯಂದಿರ ಹತ್ತಿರವಾಗಲು ಎಷ್ಟೋ ಮಂದಿ ಮಕ್ಕಳು ಏನೇನೋ ದಾರಿ ಹುಡುಕುತ್ತಿರಬೇಕು.

ಹೌದಮ್ಮ, ಇಂದು ನೀನು ಹೇಳುವ ಅನೇಕ ವಿಚಾರಗಳು, ವಿಷಯಗಳು, ಉಪಯೋಗಿಸುವ ಶಬ್ದಗಳು, ಆ ಶಬ್ದಗಳ ಜೊತೆ ಅಲೆಯಲೆಯಾಗಿ ಹೊರ ಹೊಮ್ಮುವ ಭಾವನೆಗಳು, ನಿನ್ನ ಮುಖದಲ್ಲಿ ತೇಲಾಡುವ ಭಾವನಾತ್ಮಕ ಚಿತ್ರಗಳು ನನಗೆ ಕಸಿವಿಸಿಯಾಗುವಂತೆ ಮಾಡುತ್ತದೆ. ಆ ನಿನ್ನ ಪ್ರತಿಯೊಂದು ಮಾತನ್ನು ಅಲ್ಲಗಳೆಯುವಂತಾಗುತ್ತಿದೆ. ಕೆಲವೊಮ್ಮೆ ನಿನ್ನ ಮಾತಿನ ಭಾವನೆಗಳನ್ನು ಅರಗಿಸಿಕೊಳ್ಳಲೋ ಅಥವಾ ಉಗೆದು ಬಿಸಾಕಲೋ ಕೆಲವೊಂದು ಚಟಕ್ಕೋ ಅಥವಾ ಛಲಕ್ಕೋ ಬಿದ್ದು ಬಲಿ ಯಾಗು ತ್ತಿದ್ದೇನೆ. ಕೆಲವೊಂದು ವಿಷಯಗಳಲ್ಲಿ ನಾನು ತುಂಬಾನೆ ಪ್ರಮಾಣಿಕವಾಗಿ ಹೃದಯದಿಂದ ಈ ವಿಷಯ, ವಿಚಾರಗಳು ಸರಿಯಿಲ್ಲ, ನನಗಿದು ಬೇಡ ಇದು ಅಳವಡಿಸುವ ವಿಚಾರ, ವಿಷಯಗಳಲ್ಲ'.....ಎಂಬ ವಿರೋಧಗಳು ನನ್ನಲ್ಲೇ ಹುಟ್ಟುತ್ತವೆ. ಆದರೂ ಅದನ್ನು ಒಪ್ಪಿಕೊಳ್ಳಲೇ ಬೇಕು. ಏಕೆಂದರೆ ಅದು ನಿನ್ನ ಜೀವನದ ವಿಷಯಗಳಲ್ಲವೆ? ನಿನ್ನ ಬದುಕಿನ ವಿಚಾರಗಳಲ್ಲವೇ? ಅದಕ್ಕೆ.

ಅಮ್ಮ......ನಾನು ನೀನು ಬೇರೆಯಾಗ್ತಿರೋದು, ದೂರ ಸರೀತಿರೋದು, ನನ್ನ ನಿನ್ನ ಜಗತ್ತುಗಳು ಬೇರೆಯಾಗ್ತಿರೋದು, ನನ್ನ ನಿನ್ನ ಆಕಾಶದಗಲದ ಆಸೆಗಳು ಬೇರೆಯಾಗ್ತಿರೋದು, ನಮ್ಮ ಆಕಾಶದ, ವಿಸ್ತಾರಗಳು, ಆಕಾರಗಳು ಬೇರೆಯಾಗ್ತಿರೋದು, ನಮ್ಮ ಎಣಿಕೆ, ಗಳಿಕೆಗಳ ಲೆಕ್ಕಾಚಾರಗಳು, ನಡೆ ನುಡಿಗಳು, ಚಲನವಲನಗಳು ಬೇರೆಯಾಗ್ತಿರೋದು ಜನರೇಶನ್ ಗ್ಯಾಪ್ (Generation gap) ಅಲ್ಲಮ್ಮ.

ನೀನಿದ್ದ ಕಾಲದಲ್ಲಿನ ಕೆಲವು ಸತ್ಯ ವಿಚಾರಗಳನ್ನು ಇವತ್ತಿಗೂ ನನ್ನ ಜಗತ್ತಿನ ಸತ್ಯ ವಿಚಾರವನ್ನಾಗಿ ತಿಳಿದು, ಕೆಲವೊಮ್ಮೆ "ಸಮಾಜದಲ್ಲಿದ್ದ ಮೇಲೆ ನಾವೂ ಹತ್ತಾರು ಜನರು ಒಪ್ಪುವಂತೆ ಸಮಾಜದಲ್ಲಿ ನಡೆದು ಬಾಳಬೇಕು" ಎಂದು ವಿರೋಧಭಾಸವಾಗಿ ಹೇಳುತ್ತಿದ್ದ ನಿನ್ನ ಮಾತು ನನಗೆ ತುಂಬಾನೇ ಅಚ್ಚರಿ ಹುಟ್ಟಿಸುತ್ತದೆ. ಯಾವ ಸಮಾಜದ ವಿಷಯ ಮಾತಾಡ್ತಾ ಇದ್ದೀಯಮ್ಮ?.......

ಸೂಫೀ ಸಂತನ ಹಾಗೆ ಶಿಲ್ಪಕಲೆಯೇ ನನ್ನ ಜೀವವೆಂದು, ಅದರ ಹಿಂದೆ ಬಿದ್ದು ಅದನ್ನ ಅತ್ಯಂತ ಪ್ರೀತಿಸಿ, ಅದನ್ನ ಕಲಿಯಲು ಎಂಥೆಂಥಾ ಸ್ತರಹದ್ದುಗಳನ್ನು ಪಾರುಮಾಡುತ್ತಾ ಇದ್ದಾಗ, ನಿನ್ನ ಎದುರಿಗೆ ಅಸಮಾಧಾನದಿಂದಲೇ "ಹೂಂ...." ಎಂದ ಆ ಕೆಟ್ಟ, ಘೋರ, ವಿಕಾರ ರೂಪದಲ್ಲಿರುವವರನ್ನು ನೀನು ಅಮ್ಮ ಅಪ್ಪರೆಂದು ತಿಳಿದಿರುವ ಸಮಾಜದ ಮಾತಾ? 'ಅಯ್ಯೋ ಬಿಡಮ್ಮ ಈ ಕೆಲಸ ಇಲ್ದಿದ್ರೇನಾಯ್ತು ಜೀವನಕ್ಕೆ ತಾನೇ ಈ ಕೆಲಸಕ್ಕಿಂತ ಮೆಣಸಿನ ಪುಡಿ, ಉಪ್ಪಿನಕಾಯಿ ಮಾರಿಯಾದ್ರು ಜೀವನ ಮಾಡ್ಬಹುದು' ಎಂದು ಹೇಳಿ ನಿನ್ನ ಮನಸ್ಸಿನ ಕಣ್ಣುಗಳಲ್ಲಿ ಮೆಣಸಿನಪುಡಿ, ಉಪ್ಪಿನಕಾಯಿಯನ್ನೇ ಹಿಂಡುತ್ತಾ, ನಿನ್ನ ಜೀವನದ ಪ್ರತಿಯೊಂದು ಆಗು ಹೋಗುಗಳಲ್ಲಿ ತಮ್ಮ ತಮ್ಮ ಅಂತ್ಯ ಪ್ರತಿಜ್ಞೆ (ಕಡೆಯ ತೀರ್ಮಾನ, Ultimative)ಗಳು, ಉಪದೇಶ

(Advice)ಗಳನ್ನು ಕೊಡುವ ರೂಪದಲ್ಲಿ, ಸ್ವಾರ್ಥ ಸಾಧಕನ ನಿಜ ರೂಪ ಕಾಣದೆ, ನೀನು ಒಡಹುಟ್ಟಿದವರೆಂದು ತಿಳಿದ ರೂಪದಲ್ಲಿರುವ ಸಮಾಜದ ಮಾತಾ? ಜೀವನವನ್ನು ಹಂಚಿಕೊಳ್ಳದಿದ್ದರೂ, ತೃಣಕ್ಕಿಂತ ಕಡೆಯಾದ ಸಣ್ಣ ಪುಟ್ಟದ್ದನ್ನ ಹಂಚಿಕೊಂಡು, ಸಮಯ ಸಿಕ್ಕಾಗಲೆಲ್ಲ ಹಂಗಿಸಲು ಅವಕಾಶಗಳನ್ನು ಕಳೆದುಕೊಳ್ಳದೆ, ಒಳ್ಳೆಯ ಹೆಸರು ಬಂದ ಮೇಲೆ ಅದನ್ನೂ ತಡೆದುಕೊಳ್ಳದೆ, ಹೆಸರಿಗೆ ಕೆಸರು ಬಳೆದು, ಬೆನ್ನಿಗೆ ಚೂರಿ ಹಾಕುವ ಗೋಮುಖ ವ್ಯಾಘ್ರರಂತೆ ಸ್ನೇಹಿತರ ರೂಪದಲ್ಲಿರುವ ಸಮಾಜದ ಮಾತಾ? ಹೇಳು?....

ಇವುಗಳೆಲ್ಲವೂ ಇತ್ತೀಚಿನದ್ದೇನಲ್ಲ, ಈ ಸಮಾಜವು ಒಳ್ಳೆಯ ಪಳೆಯುಳಿಕೆಯಂತೆ ಯುಗಯುಗಾಂತರಗಳಿಂದಲೂ ಇದೆ. ಅವತ್ತೂ ಸಹ ತನ್ನ ಎಲೆಯ (ತಟ್ಟೆಯ) ಹೆಣವ ನೋಡದೆ ಹಂಗಿಸುತಿತ್ತು.....ಇವತ್ತಿಗೂ ಸಹ ಇನ್ನೂ ಬುದ್ಧಿ ಕಲಿಯದೇನೇ ಪರರ ಎಲೆಯ (ತಟ್ಟೆಯ) ನೊಣವ ನೋಡಿ ಮತ್ತೆ ಹಾಗೆ ಹಂಗಿಸುತ್ತಿದೆ, ಆಡಿಕೊಂಡು ನಗುತ್ತಲಿದೆ.

ಈ ಸಮಾಜದಲ್ಲಿ ಒಬ್ಬರಿಗೊಬ್ಬರು ಆಗುವವರನ್ನ, ತನ್ನ ಹೆಂಡ, ತನ್ನ ಬುರುಡೆ ಎಂದು ತಮ್ಮಷ್ಟಕ್ಕೆ ತಾವು ಹೇಗಿದ್ದೀವೋ ಹಾಗೆ ಇರುವೆವು ಎಂದು ಒಪ್ಪಿಕೊಂಡು ಬಾಳುವವರನ್ನ ಈ 'ಸಮಾಜ' ಇಡುವುದೇ ಇಲ್ಲ. ಅಂಥವರನ್ನು ಸಮಾಜವೇ ನರಭಕ್ಷಕವಂತೆ ನಿಂತು ಕಿತ್ತುತಿಂದು, ತೇಗಿಬಿಡುತ್ತದೆ.

ಸ-ಸರಿಯಾಗಿದ್ದವರನ್ನು, ಮಾ-ಮಾನಕ್ಕಂಜಿ ಬಾಳುವವರನ್ನು, ಜ-ಜವಾಬ್ದಾರಿ ಹೊತ್ತು ಬದುಕುವವರನ್ನು, ಸ-ಸಲೀಸಾಗಿ, ಮಾ-ಮಜವಾಗಿ, ಜ-ಜಮಾಯಿಸಿ ಬಿಡುವುದು. ಅದಕ್ಕೆ ಸಮಾಜ ಅನ್ನೋದು ಬರೀ ಒಂದು ತಪ್ಪು ತಿದ್ದಲು ಅರ್ಹತೆಯುಳ್ಳ (corrective) ಹಾಗೂ ತಿದ್ದಿ ಶಿಕ್ಷೆ (Punishment) ವಿಧಿಸುವ ವಸ್ತುವನ್ನಾಗಿ ಮಾತ್ರ ನೋಡುತ್ತಿದ್ದೇವೆ.

ಅಮ್ಮ ಅಂದು ನೀನು ಧೈರ್ಯವಾಗಿ ವಿರೋಧಿಸಲು ಸಾಧ್ಯವಾಗದ ಮಾತುಗಳನ್ನೇ ಇಂದು ನಾನು ಧೈರ್ಯವಾಗಿ ವಿರೋಧಿಸುತ್ತಿರುವುದು! ಅಂದು ನೀನು ಅನ್ನಿಸಿಕೊಳ್ಳದ ಮಾತುಗಳನ್ನೇ, ಇಂದು ನಾನು ಕೇಳುತ್ತಿರುವುದು? ಎಲ್ಲ ಅದೇ, ಅಂದೂ ಅದೇ ಮಾತು, ಇಂದೂ ಅದೇ ಮಾತು. ಅದರಲ್ಲೂ ಏನೂ ವ್ಯತ್ಯಾಸವಿಲ್ಲ, ಆಗ ನಿನ್ನ ಮಾತ್ರ ಹಂಗಿಸುತ್ತಿದ್ದವರು ಈಗ ನಿನ್ನ ಜೊತೆಗೂಡಿಸಿ ನನ್ನನ್ನೂ ಹಂಗಿಸುತ್ತಿದ್ದಾರಷ್ಟೇ. ಇದೇನು ನಿನಗೆ ಹೊಸತೇ? ಹೇಳು?.....

ಅಮ್ಮ ನೀನು ಮೈಯನ್ನೆಲ್ಲ ಕಲ್ಲು ಮಾಡಿಕೊಂಡು, ಮನಸ್ಸು, ಹೃದಯವನ್ನು ಕಲ್ಲುಗಳನ್ನಾಗಿ ಮಾಡಿಕೊಳ್ಳಲು ಧೈರ್ಯವಾಗಿ ಕೆತ್ತುತ್ತಿರುವಾಗ, ನಿನಗೆ ಭಯಪಡಿಸಲು ಬರುವ ಯಾವುದೇ ಸಮಾಜವಾಗಲೀ, ಕುರೂಪ ಜಗತ್ತಾಗಲಿ, ಕೆಲಸವಿಲ್ಲದೆ ಅಂಡಲೆಯುತ್ತಾ, ವ್ಯಂಗ್ಯಕ್ಕೆ ಬಿದ್ದು ಕಾಲಹರಣ ಮಾಡುವವರಾಗಲಿ, ಬಂದರೆ ಕಲ್ಲು ಕೆತ್ತುವಷ್ಟೇ ಸುಲಭವಾಗಿ ಅವರನ್ನ ದೂರ ಮಾಡುತ್ತೇನೆ. ಸುತ್ತಿಗೆಯಲ್ಲಿ ಕಲ್ಲಿಗೆ ಹೊಡೆಯುವಷ್ಟೇ ರಭಸವಾದ ತೀಕ್ಷ್ಣವಾದ ಮಾತುಗಳಿಂದ ಅವರಿಗಂದು ಬಾಯಿ ಮುಚ್ಚಿಸಿ ಬಿಡುತ್ತೇನೆ. ನೀನು ನಿನ್ನ ಲೋಕದಲ್ಲೇ ಯುಗಗಳು ಕಳೆದರೂ, ನಿನ್ನದೇ ಆದ ಕಾಲದಲ್ಲಿ ಬದುಕುವ ನಿನಗೆ, ನನ್ನ ವಿಷಯಕ್ಕೆ ಯಾರಾದರೂ ಬಂದಾಗ ಏಕೆ ಭಯ? ಅಲ್ಲಿ ಇಲ್ಲಿ ನನ್ನನ್ನು ಬಚ್ಚಿಟ್ಟು ಜೋಪಾನ ಮಾಡುವ ಹಂಬಲ ನಿನಗೇಕೆ?

ನಿನ್ನ ಎಷ್ಟೋ ಕಣ್ಣೀರಿನ ಕಥೆಗಳು ಅರ್ಥವಾಗದೆ "ಅಮ್ಮ ಒಮ್ಮೆಯಾದರೂ ನಗು. ಈ ನಡುವೆಯಂತೂ ನೀನು ಸಂತೋಷವಾಗಿರೋದೇ ಕಂಡಿಲ್ಲ" ಅಂತ ಕೇಳಿದಾಗ, ನನ್ನ ಅಪ್ಪಿಕೊಂಡು ಹೃದಯ ಬಿಚ್ಚಿ ಮತ್ತಷ್ಟು ಅತ್ತೆ. ಮತ್ತೆ ಬೆಚ್ಚಗಿನ ಆ ನಿನ್ನ ಅಪ್ಪುಗೆಯಲ್ಲಿ ನನ್ನ ಆ ಸಮಾಜದಿಂದಲೇ ಕಾಪಾಡುವ ಹುಚ್ಚು ಏಕೆ ನಿನಗೆ? ನೀನೇ ಅಲ್ಲವೇ ನನ್ನ ಆಡಿಕೊಂಡು ನಗುವವರ ಬಾಯಿ ಮುಚ್ಚಿಸುವಂತೆ ಹಾಡಬೇಕು ಅಂತ ಅಂದಿದ್ದು (ಈ ಲೇಖನದ ಲೇಖಕಿ ಒಬ್ಬ ಹಾಡುಗಾರ್ತಿ) ಅದನ್ನೇ ನಾನು ನನ್ನ ರೀತಿಯಲ್ಲಿ ಮಾಡ್ತಾ ಇದ್ದೀನಿ. ಆದ್ರೆ ಆ ನನ್ನ ಪ್ರತಿಕ್ರಿಯೆಯ ಕಾರ್ಯ ವಿಧಾನದಲ್ಲಿ (Process) ನಾನು ಕಾಣ್ತಾ ಹೋಗ್ತಿರೋ ಜಗತ್ತೂ ಸಹ ಬೇರೆಯೇ ಆಗ್ತಾ ಹೋಗ್ತಿದೆ. ಈಗ ನೀನು ಹೇಳ್ತಿದ್ದ ಯಾವುದೇ ರೂಪದಲ್ಲಿರುವ (ಅಪ್ಪ, ಅಮ್ಮ, ಒಡಹುಟ್ಟಿದವರು, ಸ್ನೇಹಿತರು) ಸಮಾಜದ ಮನುಷ್ಯರು ನನ್ನ ಯಾವುದೇ ದಾರಿಗಳಲಿಲ್ಲ. ಅದು ನಿನಗೂ ಗೊತ್ತು.

ನಾನು ನಿನ್ನದೇ ಒಂದು ಭಾಗವಾಗಿದ್ದರೂ, ನಿನ್ನ ರಕ್ತವೇ ನನ್ನ ದೇಹದಲ್ಲಿ ಹರಿಯುತ್ತಿದ್ದರೂ ಸಹ ನಾನು ನಿನ್ನ ಪ್ರತಿರೂಪಿಯಾಗಿಲ್ಲ. ಹಾಗಾಗಿ ನನ್ನದೇ ವಿಚಾರಗಳನ್ನು ತೊಟ್ಟು, ನನ್ನದೇ ಸತ್ಯಗಳನ್ನು ನನ್ನ ಮೈಗೆ ಭಸ್ಮವನ್ನಾಗಿ ಲೇಪಿಸಿಕೊಂಡು. ಧೈರ್ಯದಿಂದ ಬಾಳುತ್ತಿರುವಾಗ, ನನಗೆ ಭಯಪಡಿಸುವ ನಿನ್ನ ಭಯ ಯಾಕಮ್ಮ? ನಿನಗೆ ಇಷ್ಟು ಮಾತ್ರ ಗೊತ್ತಾ......? ನೀನು ಹೇಳ್ದೋ ಹಾಗೆ ನಿನ್ನ ಜಗತ್ತೇ ಬೇರೆ, ಅಲ್ಲಿನ ಜನಗಳೇ ಬೇರೆ, ಅಲ್ಲಿನ ವಿಚಾರಗಳು ನಿನಗೊಂದು ಇಷ್ಟವಾಗುವುದಿಲ್ಲ, ಸರಿಬರುವುದಿಲ್ಲ. ಆದರೆ ಈ ಜಗತ್ತು, ಜನಗಳು, ವಿಚಾರಗಳನ್ನು ಪ್ರತಿಯೊಂದರಂತೆ ತಂದು ನಿನಗೆ ಹೇಳಿ ಮುಟ್ಟಿಸದಿದ್ದರೆ ನನಗೂ

ಸಮಾಧಾನವಿಲ್ಲ. ನಾನು ಈ ಜಗತ್ತು, ಜನಗಳು ಹಾಗೂ ವಿಚಾರಗಳಲ್ಲಿ ಅವಿಶ್ರಾಂತತೆ, ಚಟುವಟಿಕೆ (Busy)ಯಿಂದಿದ್ದೀನಿ. ಆದರೂ ಸಹ ನೀನಿಲ್ಲದ ಜಗತ್ತು ನನಗೆ ಎಲ್ಲೋ ಒಂದು ಕಡೆ ಒಂಟಿತನ ಸೃಷ್ಟಿಸಿದೆ. ಅದೇ ಒಂಟಿತನ, ಅದೇ ಖಾಲಿ ವಿರಾಮಗಳು (Black spaces), ಮತ್ತದೇ ಯಾವುದಕ್ಕೂ ಉಪಯೋಗಕ್ಕೆ ಬಾರದ ಪ್ರತಿ ನಿಮಿಷದ ಕನಸುಗಳು.... ಆ ನನ್ನ ಬಾಲ್ಯದ ನನಸಾಗದ ಖಾಲಿ(Blank) ಕನಸುಗಳು, ಅಲ್ಲಿ ನೀನೂ ಇದ್ದೀಯ, ಚಿಕ್ಕವಳಿರುವಾಗ ಚಂದಮಾಮನ ಕಥೆ ಹೇಳುತ್ತಿದ್ದ ಅಪ್ಪನೂ ಇದ್ದಾರೆ. ಜೂಟ್ ಮುಟ್ಟಿಸಿಕೊಂಡು ಆಟ ಆಡುತ್ತಿದ್ದ ಮಾಮನೂ ಇದ್ದಾರೆ. 'ಮೂಗು ಕುಯ್‌ತೀನಿ ನೋಡು' ಅಂತ ರೇಗಿಸ್ತಿದ್ದ ಕುರುಪ್ ಸಹ ಇದ್ದಾನೆ, ಇವತ್ತಿನ ಉಷಾ, ಮನು, ಇಂದು, ಸರಸಿ, ಭಾಸ್ಕರ್ ಎಲ್ಲರೂ ಇದ್ದಾರೆ. ಹೌದು ನನಗೆ ಅತ್ಯಂತ ಪ್ರೀತಿಯಾದ, ಒಂಟಿತನ ಕಿತ್ತು ತಿನ್ನುವ, ಖಾಲಿ ವಿರಾಮಗಳು (blank spaces) ಅಭ್ಯಾಸ ಆಗಿ ಹೋಗಿದೆ. ಅದಿಲ್ಲದೆ ಈಗ ಜೀವನವೇ ಇಲ್ಲ.

ನನಗೆ ಪ್ರೀತಿಯಿಂದ ಬೆಳೆದ ಎಷ್ಟೋ ಸಂಬಂಧಗಳು ನನಗೆ ಸಿಟ್ಟು ತರಿಸಿವೆ. ಈಗ ನಾನೇನಾಗಿರುವೆನೋ ನಿನ್ನ ಮನದ ಕಣ್ಣಿಗೆ ನನಗಂತೂ ಗೊತ್ತಿಲ್ಲ. ಆದ್ರೆ ಪ್ರತಿಯೊಂದು ಹೊಸ ಸಂಬಂಧಗಳ ಅಂಚಿನಲ್ಲೂ ನನ್ನ ಕೆಲವು ಜೀವನದ ಅಂಶಗಳನ್ನಾದರೂ ಹುಡುಕದಿದ್ದಲ್ಲಿ ನನಗೆ ಸಮಾಧಾನವಿರುವುದಿಲ್ಲ. ನಿನ್ನ ಜೀವನದ ಅಂಶಗಳೇ ನನ್ನ ಬದುಕು, ಅದಿಲ್ಲದೆ ನಾನು ಬದುಕಲಾರೆ. ನನ್ನ ಹೊಸ ಸಂಬಂಧಗಳ ಅಂಚಿನಲ್ಲಿ ನೀನು, ನಿನ್ನ ಜೀವನದ ಅಂಶಗಳು ಸಿಕ್ಕ ಅಂಥ ಸಂಬಂಧಗಳೇ ನನಗೆ ಮುಂದಿನ ದಾರಿಗಳಲ್ಲಿ ಮೈಲಿಗಲ್ಲುಗಳಾಗಿವೆಯಮ್ಮ. ನೀನು, ನಿನ್ನ ಜೀವನದ ಅಂಶಗಳು ಸಿಗದ ಸಂಬಂಧಗಳು ಧೂಳಿನ ಕಣದಷ್ಟು ಸುಲಭವಾಗಿ ನನ್ನ ಜೀವನದಿಂದ ಖಾಲಿಯಾಗಿವೆ, ದೂರ ಹೋಗಿವೆ, ಕಾಣದಾಗಿವೆ, ಮಾಯವಾಗಿವೆ..........

ನಂತರದ ಬದುಕಿನಲ್ಲಿ
ಅಲ್ಲೆಲ್ಲೋ ಒಣಗಿದ ಎಲೆಯ ಅಂಚಿನಲ್ಲಿ
ನಿನ್ನ ಬೆಚ್ಚನೆಯ ಅಪ್ಪುಗೆಯನ್ನು ಕಂಡು
ನೀನಿಲ್ಲದ ಜೀವನದ
ಒಂದಂಶದ ಕಲ್ಪನೆಯೂ ಬಾರದೆ
ನಿನ್ನೆ ನಾಳೆಗಳೆಲ್ಲವನ್ನೂ
ನಿನ್ನ ಹೃದಯದಷ್ಟೇ
ಕಾಲಾತೀತವಾಗಿ ಮಾಡುತ್ತೇನೆ.

ಬೇಕೆ ಕುಂಟೋಬಿಲ್ಲೆ ಆಟ?

ಕೊನೆ ಮನೆಗೆಸೆದು ಪಚ್ಚಿ
ಗಟ್ಟಿ ಕಣ್ಣುಮುಚ್ಚಿ
ಒಂದೊಂದೇ ಮನೆಯ
ಗಡಿ ತುಳಿಯದೇ ಹಾರಿ

'ಆಮ್ ಐ ರೈಟ್'
'ಆಮ್ ಐ ರೈಟ್'
ಪ್ರತಿ ಹೆಜ್ಜೆಗೂ
ಆತಂಕದ ಪ್ರಶ್ನೆ
ಉತ್ತರದ ನಿರೀಕ್ಷೆ

ಹೆಜ್ಜೆ ತಪ್ಪಿದರೇ
ಕಣ್ತುಂಬಿದ ನೀರು
ಮೊದಲಿಂದ ಹೊಸ ಆಟ
ಮತ್ತದೇ
'ಆಮ್ ಐ ರೈಟ್'
ಸರಿ-ತಪ್ಪಿನ ಪರೀಕ್ಷೆ!

ಈಗೀಗ
ಅದೇ ಆಟ ಆಡಿ ಆಡಿ
ಗೆರೆಯ ಮೇಲೆಲ್ಲಾ
ತಪ್ಪು ಹೆಜ್ಜೆ ಊರಿ ಊರಿ
ರೇಖೆಗಳೇ ಅಳಿಸಿವೆ
ಎಲ್ಲೆಗಳೇ ಇಲ್ಲವಾಗಿವೆ
ಪಚ್ಚಿ ಸವೆದು ಹುಡಿಯಾಗಿದೆ!

'ಆಮ್ ಐ ರೈಟ್'
'ಆಮ್ ಐ ರೈಟ್'
ನಿಧಾನಕ್ಕೆ ಅರ್ಥವಿಲ್ಲದ
ಅಮಟೆಯಾಗಿದೆ!

ಇನ್ನೂ ಇನ್ನೂ ಬೇಕೆ
ಈ ಕುಂಟೋಬಿಲ್ಲೆ ಆಟ?
ನಿರ್ಜೀವ ಪ್ರಶ್ನೆಗಳಿಗೆ
ಉತ್ತರ ಹುಡುಕುವ ಚಟ!

ರೂಪ, ಹಾಸನ

ನಾಗಾ ಮಹಿಳೆಯರು ಮತ್ತು ಶಾಂತಿ ಪ್ರಕ್ರಿಯೆ

ನಾಗಾ ಜನರು ತಮ್ಮ ಅಸ್ತಿತ್ವದ ಉಳಿವಿಗಾಗಿ ಅರ್ಧ ಶತಮಾನಕ್ಕಿಂತಲೂ ದೀರ್ಘ ಕಾಲದಿಂದ ಹೋರಾಟ ನಡೆಸುತ್ತಲೇ ಇರುವುದು ಹಾಗೂ ಅದಕ್ಕಾಗಿ ತಮ್ಮ ಬಂಧುಬಳಗವನ್ನೆಲ್ಲ ಕಳೆದುಕೊಂಡು ವೇದನೆ ಅನುಭವಿಸುತ್ತಿರುವುದು ತಿಳಿಯದ್ದೇನಲ್ಲ. ಪ್ರಬಲ ಕಾರಣಕ್ಕಾಗಿ ಹೋರಾಟ ನಡೆಸುತ್ತಲೇ ಅದಕ್ಕಾಗಿ ಸಾಕಷ್ಟು ಬೆಲೆಯನ್ನು ತೆತ್ತಿದ್ದಾರೆ. ಹಳ್ಳಿಗಳು ಸುಟ್ಟು ಹೋಗಿವೆ, ಜನಸಂಖ್ಯೆ ಇಳಿಮುಖವಾಗಿದೆ. ಹೊಸ ವ್ಯವಸ್ಥೆಗಾಗಿ ಪರದಾಡುತ್ತಿದ್ದ ಹಲವಾರು ಹದಿಹರೆಯದ ಯುವಕರು ಪ್ರಾಣತ್ಯಾಗ ಮಾಡಿದ್ದಾರೆ. ವಿವಿಧ ನಾಗಾ ಗುಂಪುಗಳು ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತ ತಮ್ಮ ನನಸಗಾದ ಕನಸುಗಳ ನಡುವೆ ಅಂಧಕಾರದಲ್ಲಿ ತಡಕಾಡುತ್ತ ಪರಿಹಾರ ಕಾಣದೇ ಒದ್ದಾಡುತ್ತಿದ್ದಾರೆ.

ನಾಗಾಗಳ ಈ ಕಥೆಯಲ್ಲಿ ಪ್ರಮುಖವಾಗಿ ಮಹಿಳೆಯರೇ ಹೆಚ್ಚು ಕಷ್ಟನಷ್ಟಗಳನ್ನು ಎದುರಿಸುತ್ತಿದ್ದಾರೆ. ನಾಗಾಗಳು ಎದುರಿಸುತ್ತಿರುವ ಈ ಸಮಸ್ಯೆಯಲ್ಲಿ ನಾಗಾ ಸಮಾಜವು ತುಣುಕು, ತುಣುಕಾಗಿ ಚದುರಿ ಹೋಗಿರುವಾಗ ನಾಗಾ ಸಮಾಜದ ಮುಖ್ಯ ಸತ್ವವಾದ ಹಾಗೂ ಕುಟುಂಬದ ಆಧಾರ ಸ್ತಂಭವಾದ ನಾಗಾ ಮಹಿಳೆಯರು ಮೌನವಾಗಿ ವೀಕ್ಷಕರಾಗಿರಲು ಸಾಧ್ಯವಿಲ್ಲ ಮತ್ತು ನಾಗಾ ಸಂಪ್ರದಾಯದ ಪ್ರಕಾರ ಎಲ್ಲದರಲ್ಲೂ ಪ್ರಮುಖ ಪಾತ್ರ ವಹಿಸುವ ಮಹಿಳೆಯರು ಇಲ್ಲಿಯೂ ಕ್ರಿಯಾಶೀಲರಾಗಿರಲು ಪ್ರಯತ್ನಿಸುತ್ತಿದ್ದಾರೆ. ನಾಗಾ ಮಹಿಳೆಯರು ಶಾಂತಿ ಪ್ರಕ್ರಿಯೆಯಲ್ಲಿ ಹೇಗೆ ಪಾಲ್ಗೊಳ್ಳುತ್ತಿದ್ದಾರೆಂಬುದನ್ನು ತಿಳಿಸುವುದೇ ಈ ಲೇಖನದ ಉದ್ದೇಶ.

ಹೋರಾಟದ ಹಿಂದಿನ ಕಥೆ

ದ್ವಿತೀಯ ಮಹಾಯುದ್ಧ ಜರುಗಿದಾಗ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಸಲುವಾಗಿ ನಡೆಸಿದ ಹೋರಾಟ ಅಂತ್ಯಕ್ಕೆ ಬಂದಿತು. ನಂತರ ಬ್ರಿಟಿಷ್ ಚಕ್ರಾಧಿಪತ್ಯವು ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಹಲವಾರು ಹೊಸ ರಾಷ್ಟ್ರಗಳನ್ನು ಹುಟ್ಟುಹಾಕಿತು. ಬ್ರಿಟಿಷ್ ಸರ್ಕಾರವು ಪ್ರಭುತ್ವಕ್ಕೆ ವಿರೋಧವಾಗಿ ನಾಗಾಲ್ಯಾಂಡ್‌ನ್ನು ಹೊಸದಾಗಿ ಹುಟ್ಟಿದ ರಾಷ್ಟ್ರಗಳಿಗೆ ಭಾರತ ಮತ್ತು ಬರ್ಮಾ (ಮಯನ್ಮಾರ್)ಗಳಿಗೆ ಕಾಣಿಕೆ ನೀಡಿತು. ಅಂದಿನಿಂದಲೂ ನಾಗಾಗಳು ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತಲೇ ಇದ್ದಾರೆ. ಭಾರತ ಸರ್ಕಾರಕ್ಕೆ ಬೆನ್ನು ಹತ್ತಿದ ಬೇತಾಳದಂತೆ ಈ ಸಮಸ್ಯೆ ಕಾಡುತ್ತಿದೆ.

ಇಂದು ಎರಡು ದೇಶಗಳ ಮಧ್ಯೆ ನಾಗಾಲ್ಯಾಂಡ್ ಸಿಲುಕಿಕೊಂಡು ಹೊಯ್ದಾಡುತ್ತಿದೆ. ಭಾರತ ಮತ್ತು ಬರ್ಮಾಗಳ ಮಧ್ಯೆ ಅಂತರರಾಷ್ಟ್ರೀಯ ಕಾಲ್ಪನಿಕ ಗಡಿರೇಖೆಯಿಂದಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ, ಬೇರೆ ಪ್ರಾಂತಗಳಾಗಿ ವಿಭಾಗಿಸಲಾಗಿದೆ. ಇದೇ ರೀತಿಯಲ್ಲಿ ಭಾರತದಲ್ಲಿ ನಾಗಾಗಳು ಅಲ್ಲಲ್ಲಿ ಮಣಿಪುರ, ಅಸ್ಸಾಂ, ಅರುಣಾಚಲ ಪ್ರದೇಶ ನಾಗಾಲ್ಯಾಂಡ್‌ಗಳಲ್ಲಿ ಚದುರಿಹೋಗಿದ್ದಾರೆ. ಹೀಗೆಯೇ ಬರ್ಮಾದಲ್ಲಿಯೂ ನಾಗಾಗಳು ವಿವಿಧ ಪ್ರಾಂತಗಳಲ್ಲಿ ವಿಂಗಡಿಸಿ ಹೋಗಿದ್ದಾರೆ.

ಇಂದಿನ ನಾಗಾಲ್ಯಾಂಡ್ 16,557 ಚದರ ಕಿ.ಮೀ. ವಿಸ್ತೀರ್ಣ ಹೊಂದಿರುವ ಒಂದು ಮಿಲಿಯನ್ ಜನಸಂಖ್ಯೆಯುಳ್ಳ ರಾಜ್ಯವಾಗಿದೆ, ಆದರೆ ಒಟ್ಟು ವಿಸ್ತೀರ್ಣ. 65,000 ಚದರ ಕಿ.ಮೀ.ನಲ್ಲಿ ವಾಸವಾಗಿರುವ 4 ಮಿಲಿಯನ್ ನಾಗಾಗಳಿದ್ದಾರೆ. ತಮಗೆ ಸರಿಯೆನಿಸಿದ್ದನ್ನು ನಾಗಾ ಜನರು ಎದ್ದು ನಿಂತು ಜಗತ್ತಿಗೆ ಸಾರಿದಾಗ ಭಾರತ ಸರ್ಕಾರವು ಹಲವಾರು ಕಠೋರ ಕಾನೂನು ಕ್ರಮಗಳನ್ನು ಜಾರಿಗೊಳಿಸಿತು. ಬ್ರಿಟನ್ ಸಾಮ್ರಾಜ್ಯ ಭಾರತದಲ್ಲಿ ರಾಜ್ಯವಾಳುತ್ತಿರುವಾಗ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರೂ ಇದನ್ನು ಬೆಂಬಲಿಸಿದರು. ನಾಗಾಗಳು ದೇಶದ ಯಾವುದೇ ಭಾಗದಲ್ಲಿಲ್ಲದ ಕಪ್ಪು ಕಾನೂನನ್ನು ಈಶಾನ್ಯ ರಾಜ್ಯಗಳಲ್ಲಿ ಜಾರಿಗೊಳಿಸಿರುವುದನ್ನು ಕಂಡು ದುಃಖಿಸುತ್ತಿದ್ದಾರೆ. ಅಲ್ಲದೇ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿದ್ದಾರೆ.

1958ರ ದಿ ಸ್ಪೆಶಲ್ ಪವರ್ಸ್ ಆರ್ಡಿನೆನ್ಸ್ ಅನ್ನು ಸೆಪ್ಟೆಂಬರ್‌ನಲ್ಲಿ 'ಆರ್ಮಡ್ ಫೋರ್ಸಸ್ ಆಕ್ಟ್' ಆಗಿ ಪರಿವರ್ತಿಸಿ ನಂತರ ದಿ ಆರ್ಮಡ್ ಫೋರ್ಸಸ್ ಸ್ಪೆಶಲ್ ಪವರ್ಸ್ ಆಕ್ಟ್ 1972 ಎಂದು ತಿದ್ದುಪಡಿ ಮಾಡಲಾಯಿತು. ಇದನ್ನು ಎಲ್ಲ ಈಶಾನ್ಯ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದೇ ರೀತಿಯಾಗಿ ಜಾರಿಗೊಳಿಸಲಾಯಿತು.

ತಲೆಯ ಮೇಲೆ ಯಾವ ಗಳಿಗೆಯಲ್ಲಾದರೂ ಬೀಳುವ ಭಯವಿರುವ ಡೆಮಾಕ್ಲಿಸ್‌ನ ತೂಗುವ ಕತ್ತಿಯಂತೆ ಕಠೋರ ಕಾನೂನಿನಡಿಯಲ್ಲಿ ನಾಗಾಗಳು ನಿಜವಾಗಿಯೂ ಶಸ್ತ್ರ ಸಜ್ಜಿತ ಮಿಲಿಟರಿ ಆಡಳಿತದಲ್ಲಿ ಕಳೆದ ಹಲವಾರು ದಶಕಗಳಿಂದ ಬದುಕುತ್ತಿದ್ದಾರೆ. ಇದರ ಫಲವಾಗಿ ಜರುಗುತ್ತಿರುವ ಯುದ್ಧಗಳಿಂದ ಸಾವಿರಾರು ಜನರ ಕೊಲೆ, ಹಳ್ಳಿಗಳು ಸುಡುವುದು, ಮಹಿಳೆಯರ ಮೇಲಿನ ಅತ್ಯಾಚಾರ ಹಲವಾರು ವಿಧವೆಯರು ಕಣ್ಣೀರು ಸುರಿಸುತ್ತಿರುವುದು ಹೀಗೆ ಕಳೆದ 50 ವರ್ಷಗಳಿಂದ ನಡೆಯುತ್ತಿರುವ ಘಟನೆಗಳನ್ನು ನೋಡಿದರೆ ಇಂದು ನಾಗಾ ಕುಟುಂಬಕ್ಕೆ ದುಃಖದ ಕಾರಣ ಹೇಳಲು ಯಾವುದೇ ವಿಷಯಗಳಿಲ್ಲ. ಭಾರತದ ಕಡೆಯೂ ದುರಂತ ಅಧ್ಯಾಯವಾಗಿ ಜೀವಗಳ ನಾಶ, ಸಂಪತ್ತಿನ ನಾಶ,

ಸಮಯ ಮತ್ತು ಶಕ್ತಿಯು ನಷ್ಟವಾಗಿದೆ. ಈ ರೀತಿಯಾಗಿ ಅಪ್ರಾಕೃತಿಕ ಘರ್ಷಣೆ ಭಾರತದ ಸರ್ಕಾರ ಮತ್ತು ನಾಗಾಗಳ ಮಧ್ಯೆ ಎರಡು ಕಡೆಯವರೂ ಪರಸ್ಪರ ಅರಿತುಕೊಂಡು ಗೌರವ ಕೊಡದಿರುವುದರಿಂದ ಮತ್ತು ಪರಸ್ಪರ ದೃಷ್ಟಿಸಿ ನೋಡಲು ಸಿದ್ಧರಿಲ್ಲದೇ ಇರುವುದರಿಂದ ಹೋರಾಟ ನಡೆಯುತ್ತಲೇ ಇದೆ. ನಾಗಾ ಜನಜೀವನವನ್ನು ಎಲ್ಲ ರೀತಿಯಿಂದಲೂ ನಾಶಗೊಳಿಸುವ, ಅಪನಂಬಿಕೆ, ದ್ವೇಷ, ಕೊಲೆ, ಅಸಹನೆ ಜನರ ವಿಭಜನೆ, ಹೀನಾಯ ನಡವಳಿಕೆ, ಅಸೂಯೆ ಮತ್ತು ಇನ್ನೂ ಹಲವಾರು ವಿಧದಿಂದ ಹಿಂಸೆಯ ಸಂಸ್ಕೃತಿಯಲ್ಲಿ ಒಟ್ಟು ಜೀವನ ಸಶಸ್ತ್ರಮಯ ವಾಗುವಿಕೆಯಿಂದಾಗಿ ನಾಗಾ ಜನರ ಬದುಕಿನ ಮುಖ್ಯ ಬುನಾದಿಗೆ ಹೊಡೆತ ತಂದೊಡ್ಡಿದೆ. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹೀಗೆ ಎಲ್ಲ ರೀತಿಯಲ್ಲಿಯೂ ಪ್ರಹಾರಕ್ಕೊಳಗಾಗಿದೆ. ಮತ್ತೊಂದೆಡೆ ಇಷ್ಟೆಲ್ಲ ಹಿಂಸೆಯ ಮಧ್ಯೆ ಜಾಗತೀಕರಣ, ಉದಾರೀಕರಣಗಳ ಫಲವಾಗಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯುತ್ತಲೇ ಹೊಸ ಶತಮಾನಕ್ಕೆ ಕಾಲಿರಿಸಿದ್ದೇವೆನ್ನುವುದು ನಿಜಕ್ಕೂ ವಿಪರ್ಯಾಸದ ಸಂಗತಿ.

ಶಾಂತಿಯೊಂದರಿಂದ ಪರಸ್ಪರರು ಅರಿತುಕೊಳ್ಳಲು ಹಾಗೂ ಗೌರವಿಸುವುದನ್ನು ಸಾಧ್ಯವಾಗಿಸಬಹುದು. ಒಬ್ಬರಿಗೊಬ್ಬರು ಕೊಡುವುದು ಹಾಗೂ ನೀಡುವುದರ ಮೂಲಕ ಸಂಧಾನ ಮಾಡಿಕೊಳ್ಳಬಹುದು. ಕಳೆದ ವರ್ಷಗಳಲ್ಲಿ ಭಾರತ ನಾಗಾ ಸಮಸ್ಯೆಯ ಸಂಧಾನದಿಂದ ಆದದ್ದೇನು? ಕೇವಲ ಶಕ್ತಿಹೀನ ಪಕ್ಷದ ಮೇಲೆ ಸಾಧಿಸಿದ ಶಕ್ತಿವಂತ ಪಕ್ಷದ ಗೆಲುವು. ನ್ಯಾಯವು ಯಾವಾಗಲೂ ಶಕ್ತಿಯುತ ಪಕ್ಷದ್ದೇ ಆಗಿರುತ್ತದಲ್ಲವೆ? ಈ ರೀತಿಯಾಗಿ 1960 ರ 16 ಅಂಶಗಳ ಅಗ್ರಿಮೆಂಟ್‌ನಡಿಯಲ್ಲಿ ನಾಗಾಲ್ಯಾಂಡ್ ರಾಜ್ಯದ ಸೃಷ್ಟಿ ಸಾರ್ವಜನಿಕರ ಅಭಿಪ್ರಾಯ ಹಾಗೂ ಇಚ್ಛೆಗೆ ಬೆಲೆ ನೀಡದೇ ಹಿಂಬಾಗಿಲಿನ ಮೂಲಕವೆ ನಡೆದು ಹೋಯಿತು. ಹಿಂಬಾಗಿಲಿನಿಂದ ಎಂದುದು ಏಕೆಂದರೆ ಭಾರತ ಸರ್ಕಾರವು ಕೆಲವು ಸರ್ಕಾರಿ ಅಧಿಕಾರಿಗಳನ್ನು ವಿರೋಧಿಗಳ ಪರವಾಗಿ ಆರಿಸಿತು. ಆಗ ನಾಗಗಳನ್ನು ಬೇರೆ ಬೇರೆಯಾಗಿ ವಿಭಜಿಸಲಾಯಿತು. ಇದರಿಂದಾಗಿ 15,519 ಚದರ ಕಿ.ಮೀ ವಿಸ್ತೀರ್ಣ ಮಣಿಪುರದಲ್ಲಿ ಉಳಿಯಿತು. ಇದು ಈಗಿನ ನಾಗಾಲ್ಯಾಂಡ್ ರಾಜ್ಯದ ವಿಸ್ತೀರ್ಣದಷ್ಟೇ ಇದೆ.

ಮತ್ತು ಇದರಷ್ಟೇ ಸ್ಥಳ ಅಸ್ಸಾಂ ಮತ್ತು ಅರುಣಾಚಲ ಪ್ರದೇಶಗಳಲ್ಲಿಯೂ ಇದೆ.

1964 ರ ಯುದ್ಧ ವಿರಾಮದ ಮಾತುಕತೆಯಲ್ಲಿ ಬಿಕ್ಕಟ್ಟು ಉಂಟಾದಾಗ ಫೆಡೆರಲ್ ಸರ್ಕಾರವು ಭಾರತ ಸರ್ಕಾರ ತನ್ನ ಮೇಲೆ ಹೇರಿದ ಒತ್ತಡವನ್ನು ಒಪ್ಪಿಕೊಳ್ಳಲಿಲ್ಲ. ಇದೇ ಸಮಯದಲ್ಲಿ ಭಾರತ ಸರ್ಕಾರವು ಫೆಡೆರಲ್ ಸರ್ಕಾರವನ್ನು ವಿಭಜಿಸಿತು. ಪರಿಣಾಮವಾಗಿ 1968 ರಲ್ಲಿ ಕ್ರಾಂತಿಕಾರಿ ಸರ್ಕಾರ ಅಧಿಕಾರಕ್ಕೆ ಬಂದಿತು. 1964 ರ ಯುದ್ಧ ವಿರಾಮ ನೀತಿಯನ್ನು ರದ್ದು ಮಾಡಲಾಯಿತಲ್ಲದೆ, ನಾಗಾಲ್ಯಾಂಡ್ ಸಮಸ್ಯೆಯನ್ನು ವಿದೇಶಾಂಗ ಖಾತೆಯಿಂದ ಗೃಹ ಖಾತೆಗೆ ವರ್ಗಾಯಿಸಲಾಯಿತು. ಎಲ್ಲೆಡೆಯಲ್ಲಿಯೂ ಸಶಸ್ತ್ರ ಯುದ್ಧಗಳು ಪ್ರಾರಂಭವಾದವು. ಅಂದಿನಿಂದ ಹಲವಾರು ಅಕಾರ್ಡ್‌ಗಳನ್ನು ಜಾರಿಗೆ ತರಲಾಯಿತು. 1997ರಲ್ಲಿ ಯುದ್ಧ ವಿರಾಮ ಸಂಧಾನವನ್ನು ಮಾಡಿಕೊಳ್ಳ ಲಾಯಿತು. ಕಳೆದ ಮೂರು ವರ್ಷಗಳಿಂದ ಯಾವುದೇ ರೀತಿಯ ಪರಿಹಾರವಿಲ್ಲದೆ ಎಳೆದಾಡುತ್ತಿದೆ. ಶಾಂತಿಯ ಹುಡುಕಾಟದ ವಿದ್ಯಾಮಾನಗಳನ್ನು ಅವಲೋಕಿಸಿದಾಗ ಪ್ರಸ್ತುತ ನಾಗಾಲ್ಯಾಂಡಿನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಅಗ್ಯತವಾದ ಹಿನ್ನೆಲೆಯನ್ನು ನೀಡುತ್ತದೆ.

ಇಂದು ನಾವು ಗಮನಿಸುತ್ತಿರುವಂತೆ ಎರಡೂ ಗುಂಪಿನವರು ಆರಂಭದಿಂದಲೇ ಪರಸ್ಪರ ದೃಷ್ಟಿಸಿ ನೋಡಲು ಮತ್ತು ಪರಸ್ಪರ ಭಾವನೆಗಳನ್ನು, ಅಭಿಪ್ರಾಯಗಳನ್ನು ಅರಿಯಲು ನಿರಾಕರಿಸು ತ್ತಿದ್ದಾರೆ. 1947ರ ಪ್ರಾರಂಭದಿಂದ 1950 ರ ಮಧ್ಯದ ಅವಧಿಯವರಗೆ ನಾಗಾಗಳು ಸಮಸ್ಯೆಯ ಪರಿಹಾರಕ್ಕಾಗಿ ಅಹಿಂಸೆಯ ಮಾರ್ಗವನ್ನೆ ಅನುಸರಿಸಿದರು. ಆದರೆ ಭಾರತ ಸರ್ಕಾರವು 1956 ರಲ್ಲಿ ಸೈನಿಕರನ್ನು ನಾಗಾಲ್ಯಾಂಡ್‌ಗೆ ಕಳಿಸುವುದರ ಮೂಲಕ ಹಿಂಸೆಯ ಮುಖಾಂತರ ಸಮಸ್ಯೆಯ ಪರಿಹಾರಕ್ಕಾಗಿ ಪ್ರಯತ್ನಿಸಿತು.

ಈ ರೀತಿಯಾಗಿ ನಾಗಾಲ್ಯಾಂಡ್‌ನಲ್ಲಿ ಭಾರತದ ಪ್ರಥಮ ದಂಗೆಕೋರ ನೀತಿ ಪ್ರಕಟವಾಯಿತು. 50 ವರ್ಷಗಳಿಗಿಂತಲೂ ಅಧಿಕ ಅವಧಿಯಿಂದಲೂ ನಡೆಯುತ್ತಿರುವ ಈ ಹೋರಾಟದಲ್ಲಿ ಭಾರತೀಯ ಹಾಗೂ ನಾಗಾ ಜನರು ಸಾವಿಗೀಡಾಗುತ್ತಲೇ ಇದ್ದಾರೆ. 1997 ರಲ್ಲಿ 'ಯುದ್ಧ ವಿರಾಮ' ಮಾತುಕತೆ ಪ್ರವೇಶಿಸಿದ ಮೇಲೆ ಎರಡೂ ಕಡೆಯವರಿಗೆ ಸಮಸ್ಯೆ ಪರಿಹಾರವಾಗಬಹುದೆಂಬ ನಿಟ್ಟಿನಲ್ಲಿ ಆಶಾಕಿರಣ ಮೂಡಿದೆ. NSCN(IM)ಮತ್ತು ಭಾರತ ಸರ್ಕಾರಗಳ ಮಧ್ಯೆ ಅಂತಹ ಪ್ರಗತಿಯೇನೂ ಕಾಣದಿದ್ದರೂ ಯುದ್ಧ ವಿರಾಮ ಮಾತುಕತೆ ಕನಿಷ್ಟಪಕ್ಷ ನಾಗಾಗಳು ಮತ್ತು ಭಾರತೀಯರ ಧ್ವನಿ ಕೇಳಿಸಿಕೊಳ್ಳುವಷ್ಟರ ಮಟ್ಟಿಗೆ ಮುಂದೆ ಬಂದಿದೆ. ಇದು ಭರವಸೆ ನೀಡುವ ಅಂಶವಾಗಿದೆ.

ಜನರ ಧ್ವನಿ ಗಟ್ಟಿಗೊಳಿಸುವಲ್ಲಿ ನಾಗಾ ಪುರುಷರ ಜೊತೆಗೆ ನಾಗಾ ಮಹಿಳೆಯರೂ ತಮ್ಮ ನಾಗಾ ಸಂಪ್ರದಾಯದಿಂದ ಸ್ಫೂರ್ತಿ ಹೊಂದಿ ತಮ್ಮ ಧ್ವನಿಯನ್ನು ಒಟ್ಟುಗೂಡಿಸಿದ್ದಾರೆ.

ನಾಗಾ ಪ್ರಜಾಪ್ರಭುತ್ವ - ಅನಂತ ಕಾಲದಿಂದಲೂ ನಾಗಾ ಜನರು ಉನ್ನತ ಶ್ರೇಣಿಯ ಸಮಾಜ ವ್ಯವಸ್ಥೆಯಲ್ಲಿಯೇ

ಬದುಕುತ್ತಿದ್ದರು, ಅದು ಅತ್ಯಂತ ಸರಳವಾದ ನೇರವಾದ, ಶುದ್ಧವಾದ, ಪ್ರಜಾಪ್ರಭುತ್ವವಾದಿ ಸಮಾಜ ವ್ಯವಸ್ಥೆಯಾಗಿತ್ತು. ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರತಿಯೊಬ್ಬ ನಾಗರಿಕನಿಗೂ ಯಾವುದೇ ರೀತಿಯ ನಿರ್ಧಾರ ಕೈಗೊಳ್ಳುವಾಗ ನೇರವಾಗಿ ತನ್ನ ಅಭಿಪ್ರಾಯ ಮಂಡಿಸುವ ಅವಕಾಶ ನೀಡಲಾಗುತ್ತಿತ್ತು. ಇಲ್ಲವೇ ತಾನು ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆ ಮಾಡಿದ ನಾಯಕ (ಮುಖಂಡ) ನ ಮುಖಾಂತರ ನಿರ್ಧಾರ ತಿಳಿಸಬಹುದಿತ್ತು.

ಸಾಮಾಜಿಕ ಜೀವನದಲ್ಲಿ ಪ್ರತಿಯೊಬ್ಬರ ಅಭಿಪ್ರಾಯಕ್ಕೂ ಬೆಲೆಯಿರುತ್ತಿದ್ದುದರಿಂದ ಯಾರೂ ಸಮೂಹ ಜೀವನದಿಂದ ವಿಮುಖರಾಗುತ್ತಿದ್ದಿಲ್ಲ. ಹಳ್ಳಿಯ ಮುಖಂಡರ ಮೂಲಕವೇ ನ್ಯಾಯ ತೀರ್ಮಾನವು ನೇರವಾಗಿ, ನ್ಯಾಯವಾಗಿ, ತೆರೆದ ಹೃದಯದಿಂದ, ಪರಿಣಾಮಕಾರಿಯಾಗಿ ಯಾವುದೇ ರೀತಿಯ ಕಾನೂನಿನ ತೊಡಕಿಲ್ಲದಂತೆ ಆಗುತ್ತಿತ್ತು. ಹಳ್ಳಿಯ ಸಂಪ್ರದಾಯವನ್ನು ವಿರೋಧಿಸುವಂತಹ ಧೈರ್ಯ ಒಬ್ಬರಿಗೂ ಇರುತ್ತಿದ್ದಿಲ್ಲ. ನಾಗಾ ಹೊ ಹೊ , ನಾಗಾ ಸಮಾಜದ ಪ್ರಮುಖ ವಿಭಾಗ ವಿವಿಧ ನಾಗಾ ಬುಡಕಟ್ಟು ಜನರಿಂದ ಘೋಷಣೆ ಮಾಡಲ್ಪಡುತ್ತದೆ. ಇದು ಆಯಾ ಬುಡಕಟ್ಟು ಹಳ್ಳಿಯ ವಿಭಾಗದಿಂದ ಮತ್ತು ಆಯಾ ಹಳ್ಳಿಗಳಲ್ಲಿ ಮುಖ್ಯಸ್ಥರ ಮಂಡಳಿಯ ಪ್ರಮುಖ ಮುಖಂಡದಿಂದ ಆರಿಸಲ್ಪಡುತ್ತದೆ. ನಾಗಾ ಜನರು ಇಂದಿಗೂ ಇದೇ ರೀತಿಯ ನಾಗಾ ಸಾಂಪ್ರದಾಯಿಕ ಪ್ರಜಾಪ್ರಭುತ್ವವನ್ನು ಅನುಸರಿಸುತ್ತಾರೆ. ನಾಗಾ ಪ್ರದೇಶಗಳಲ್ಲಿರುವ ಮಹಿಳಾ ಸಮಿತಿಗಳು ಕೂಡ ಇದೇ ಸಂಪ್ರದಾಯವನ್ನು ಅನುಸರಿಸುತ್ತಾರೆ.

ಹಳ್ಳಿಯ ಮುಖಂಡರ ಸಮಿತಿಯು ಯುದ್ಧ ಸಾರಿದಾಗ ಮತ್ತು ಪುರುಷರು ಯುದ್ಧಕ್ಕೆ ತೆರಳಿದಾಗ, ಯುದ್ಧ ನಿಲ್ಲುವ ಸೂಚನೆಯಿಲ್ಲದೇ ಮುಂದುವರೆಯುವಾಗ, ದಂಗೆಯೆದ್ದ ಸೈನಿಕರು ನೀತಿ ನಿಯಮವಿಲ್ಲದೇ ಕೊಂದುಹಾಕುತ್ತಿರುವಾಗ, ನಾಗಾ ಸಂಪ್ರದಾಯುವು ಮಹಿಳೆಯರಿಗೆ ಅವರ ಪವಿತ್ರವಾದ ಕರ್ತವ್ಯವನ್ನು ನೆನಪಿಸಿ ಯುದ್ಧ ನಿಲ್ಲಿಸಲು ಸಹಾಯ ಮಾಡಬೇಕೆಂದು ತಿಳಿಸುತ್ತದೆ. ಯಾವುದೇ ಪಕ್ಷ ಸೋಲನ್ನನುಭವಿಸಿದಾದ ಮಹಿಳೆಯರ ಪರಾಧೀನ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಇಲ್ಲದಿದ್ದರೆ ಸಾಂಕ್ರಾಮಿಕ ರೋಗಗಳು ಇಲ್ಲವೇ ಪ್ರಾಕೃತಿಕ ವಿಕೋಪಗಳು ತಮ್ಮನ್ನು ಕಾಡುತ್ತವೆಂದು ನಂಬುತ್ತಾರೆ. ಮುಖಂಡರನ್ನು ಮನೆಗೆ ಕರೆತಂದಾಗ ಮತ್ತು ಸಾಂಪ್ರದಾಯಿಕ ಆಚರಣೆಗಳನ್ನು ಮುಖಂಡನ ಮನೆಯಲ್ಲಿ ನಡೆಸುವಾಗ ನಾಯಕರು ಮಹಿಳೆಯರೊಂದಿಗೆ ಅಪರಾಧಿಯ ಹಳ್ಳಿಗೆ ವಾಪಸ್ಸಾಗುತ್ತಾರೆ ಮತ್ತು ಕರ್ತವ್ಯ ನಿರತನಾದ ಯಾವುದೇ ದಂಗೆಕೋರರನ್ನು ಸ್ಪರ್ಶಿಸಬಾರದೆಂದು ನಾಗಾ ಸಂಪ್ರದಾಯ ಆದೇಶ ಮಾಡುತ್ತದೆ. ಇದೇ ರೀತಿಯಲ್ಲಿ ಮಹಿಳೆಯರು ನಡೆಸುವ ಪೂಜಾವಿಧಿಯನ್ನು ಧಿಕ್ಕರಿಸಿದ ಪುರುಷರಿಗೂ ಕೆಟ್ಟ ಅದೃಷ್ಟ ಕಾದಿದೆಯೆಂದೂ ನಂಬಲಾಗುತ್ತಿದೆ. ನಾಗಾ ಜನರು ತಮ್ಮ ಸಂಪ್ರದಾಯಗಳ ಆಚರಣೆಯಿಂದ ದೃಢವಾದ ಮತ್ತು ಹೆಚ್ಚಿನ ಸ್ಫೂರ್ತಿಯನ್ನು ಪಡೆಯುತ್ತಾರೆ ಮತ್ತು ತಮ್ಮ ಸೃಜನಶೀಲ ಸಾಂಸ್ಕೃತಿಕ ಮೌಲ್ಯಗಳನ್ನು ಗಟ್ಟಿಗೊಳಿಸುವ ಅವಶ್ಯಕತೆ ಈಗ ನಡೆಯುತ್ತಿರುವ ಹೋರಾಟದ ಪರಿಸ್ಥಿತಿಯಲ್ಲಿ ಬಹಳವಿದೆಯೆಂದು ಅವರ ನಂಬಿಕೆ. ನಾಗಾಗಳು ಇಂದು ಕ್ರಿಶ್ಚಿಯನ್ ಸಮುದಾಯದಲ್ಲಿ ಸೇರಿಕೊಂಡಿರುವುದರಿಂದ ನಾಗಾ ಸಮಾಜದಲ್ಲಿ ನಂಬುಗೆಯ ಪುರುಷ ಮತ್ತು ಮಹಿಳೆಯರೇ ಪ್ರತಿವಾದಿಕರಾಗಿದ್ದಾರೆ. ಶಾಂತಿಯ ಅವರ ಜೀವನವು ಬೈಬಲ್‌ನ ಶಿಕ್ಷಣದಿಂದಾಗಿ ಸಾಕಷ್ಟು ಬದಲಾಗಿದೆ. ಮತ್ತು ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕ್ರಿಶ್ಚಿಯನ್ ಸಮಾಜದ ಪ್ರಕಾರ ಪ್ರತೀಕಾರ ತೀರಿಸಿಕೊಳ್ಳುವುದು ಬಿಟ್ಟು ಕ್ಷಮಿಸುವಂತಹ ಪರೀಕ್ಷೆಗೆ ಒಳಪಡುತ್ತವೆ. ಇಂತಹ ಪರಿಸ್ಥಿತಿಗಳನ್ನು ನಿಭಾಯಿಸಲು ಕುಟುಂಬದಿಂದಲೇ ಚರ್ಚಿನ ಪಾತ್ರ ಪ್ರಾರಂಭವಾಗುತ್ತದೆ. ನಾಗಾ ಮಹಿಳೆಯರು ತಮ್ಮ ಆಲೋಚನೆಗಳನ್ನು ಗಟ್ಟಿಗೊಳಿಸಿಕೊಳ್ಳುವಲ್ಲಿ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದಾರೆ.

ಕ್ರಿಶ್ಚಿಯನ್ ಅಹಿಂಸಾ ಸಂಪ್ರದಾಯವು ಅಹಿಂಸೆ ಸಂಪ್ರದಾಯವನ್ನು ಭಾರತದಿಂದ ಪಡೆದುಕೊಂಡಿರುವುದು ಅದರಲ್ಲೂ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿರುವುದು ಒಂದು ಆಶಾವಾದ ಮೂಡಿಸುತ್ತದೆ. ಈ ರೀತಿಯಾದ ಹಿನ್ನೆಲೆ ಮತ್ತು ಐತಿಹಾಸಿಕ ಘಟನೆಗಳ ಪ್ರತಿಫಲದಿಂದ ನಾಗಾ ಸಂಪ್ರದಾಯದಲ್ಲಿ ಅಡಗಿರುವ ದೃಢ ವಿಶ್ವಾಸ ಮತ್ತು ಗಾಂಧೀಜಿಯವರ ಪ್ರಭಾವಕ್ಕೊಳಗಾದ ಭಾರತೀಯರು ಅಹಿಂಸೆಯಿಂದ ಸಾಧಿಸಿದ ಜಯ ಇವುಗಳ ಮೂಲಕ "ಆತ್ಮ ಸಾಕ್ಷಿಯ ಪ್ರಯಾಣ" - ಭಾರತೀಯರ ಆತ್ಮಗಳನ್ನು ಮತ್ತು ನಾಗಾ ಜನರ ಮನಸ್ಸನ್ನು ಮುಟ್ಟಲು ಪ್ರಯಾಣಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಆಪಾದನೆಗಳು ಹಾಗೂ ಪ್ರತಿಪಾದನೆಗಳು ಇರುವುದು ಹೆಚ್ಚಲ್ಲ. ಭಾರತವನ್ನು ತಲುಪುವ ಮುಂಚೆ ನಾಗಾ ಸಮಾಜದಲ್ಲಿರುವ ಹುಳುಕು ಏನೆಂದು ನಾವು ಅರಿತುಕೊಳ್ಳಬೇಕಾಗಿದೆ. ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವುದರಿಂದ ಆತ್ಮವಿಶ್ವಾಸ ಗಳಿಸಿಕೊಂಡು ದೃಢವಾಗಲು ಸಹಾಯವಾಗುತ್ತದೆ. ಈ ರೀತಿ ಮಾಡುವಾಗ ಭಾರತವೂ ನಮ್ಮ ಆಸಕ್ತಿಗಳತ್ತ ಹಾಗೂ ಬೇಡಿಕೆಗಳತ್ತ ಗಮನ ಹರಿಸಬೇಕು ಮತ್ತು ಸಮಸ್ಯೆಗೆ ಸಂಬಂಧಿಸಿದಂತೆ ಎರಡು ಕಡೆಯಿಂದ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಹುಡುಕಿದರೆ ಎರಡೂ ಕಡೆಯವರು ಪರಸ್ಪರ ಗೌರವಿಸುವುದನ್ನು ಮತ್ತು ಪರಸ್ಪರ ಅಭಿಪ್ರಾಯಗಳನ್ನು ಅರಿಯುವುದರ ಮೂಲಕ ಇಬ್ಬರಿಗೂ ಸಮ್ಮತಿಯಾಗುವ ಸ್ವೀಕಾರಾರ್ಹ ಪರಿಹಾರ ಕಂಡುಕೊಳ್ಳಬಹುದು.

ನಾಗಾ ಮಹಿಳೆಯರು ಇನ್ನಿತರ ನಾಗಾ ಜನರ ಸಂಘಟನೆ

ಗಳೊಂದಿಗೆ ಸೇರಿಕೊಂಡು ಜಂಟಿಯಾಗಿ ತಮ್ಮ ದೃಢವಾದ ಹೆಜ್ಜೆಗಳನ್ನಿಟ್ಟು ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದಲ್ಲದೇ ಸ್ವತಂತ್ರವಾಗಿಯೂ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದಾರೆ. ಈ ರೀತಿಯಲ್ಲಿ NPMHR ಪ್ರಾರಂಭಿಸಿದ "ಆತ್ಮಸಾಕ್ಷಿಯ ಪ್ರಯಾಣ" ಎಲ್ಲ ಕಡೆಯ ನಾಗಾ ಕ್ಷೇತ್ರಗಳ ಜನತೆ ಹೊಸ ದೆಹಲಿಗೆ ಪ್ರಯಾಣ ಹೊರಟಿತು. ಭಾರತೀಯ ಪ್ರತಿಭಾವಂತರನ್ನು ಮತ್ತು ನಾಗರೀಕ ಮತ್ತು ಪ್ರಜಾಪ್ರಭುತ್ವದ ಹಕ್ಕುಗಳ ಪ್ರತಿಪಾದಕ ಗುಂಪುಗಳನ್ನು ಹೊಸ ದೆಹಲಿಯ ರಾಜ್‌ಘಾಟ್‌ನಲ್ಲಿರುವ ಗಾಂಧಿ ಸಮಾಧಿಯ ಬಳಿ ನಡೆಯಲಿರುವ ಪ್ರಾರ್ಥನಾ ಸಭೆಗೆ ಆಹ್ವಾನಿಸಿತು. ಅಲ್ಲಿ ಜನರಿಂದ ಜನರಿಗಾಗಿ ಮಾತುಕತೆ ನಡೆಯಿತು ನಾಗಾ ಮಹಿಳೆಯರು ಇತರ ನಾಗಾ ಸಂಘಟನೆಗಳೊಡಗೂಡಿ ನಡೆಸಿದ ಈ ಸಭೆಯಲ್ಲಿ ಹೊಸ ರೀತಿಯ ಆಧ್ಯಾತ್ಮಿಕ ಅನುಭವಕ್ಕೊಳಗಾದರು. ದೆಹಲಿಗೆ ಪ್ರಯಾಣ ಆರಂಭಿಸಿದಾಗ ನಾಗಾ ಮಹಿಳೆಯರು ಎಲ್ಲ ಪಟ್ಟಣಗಳೆಡೆಗೆ ತಮ್ಮ ಕಥೆಗಳನ್ನು ಹಾಗೂ ಅಭಿಪ್ರಾಯಗಳನ್ನು ತಿಳಿಸುತ್ತ ಪ್ರಯಾಣಿಸಿದರು, ಇವರೊಂದಿಗೆ NPMHR ಚರ್ಚಿನ ಮುಖಂಡರು ಮತ್ತು ಇತರ ನಾಗಾ ಜನರ ಸಂಘಟನೆಗಳನ್ನು ಜೊತೆಗೂಡಿದ್ದರು. ಈ ಪ್ರಯಾಣಗಳನ್ನು ಹೊರತುಪಡಿಸಿ ಮಣಿಪುರದ ನಾಗಾ ಮಹಿಳೆಯರ ಯೂನಿಯನ್ ಶಾಂತಿ ಸಮ್ಮೇಳನಗಳನ್ನು ನಡೆಸಿತು. ಅಲ್ಲವೇ ಹಲವಾರು ಮಹಿಳೆಯರ ಯೂನಿಯನ್ ಶಾಂತಿ ಸಮ್ಮೇಳನಗಳನ್ನು ನಡೆಸಿತು. ಹಲವಾರು ಮಹಿಳಾ ಪ್ರತಿನಿಧಿಗಳನ್ನು ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಮತ್ತು ಶಾಂತಿ ಸಂಧಾನದಲ್ಲಿ ಪಾಲ್ಗೊಳ್ಳಲು ಬೇಕಾದ ತರಬೇತಿ ಪಡೆಯಲು ತಿಳಿಸಿತು. ಈ ರೀತಿಯ ತರಬೇತಿ ಪಡೆದಿದ್ದರಿಂದ ಮತ್ತು ನಾಗಾ ಸಂಪ್ರದಾಯದ ಮೂಲಕ ಗಳಿಸಿದ ಅನುಭವಗಳಿಂದ ನಾಗಾ ಮಹಿಳೆಯರು ಸೆಮಿನಾರ್‌ಗಳನ್ನು, ವರ್ಕ್‌ಶಾಪ್‌ಗಳನ್ನು ಮತ್ತು ಧ್ಯಾನ ತರಬೇತಿಗಳನ್ನು ಪುರುಷರು ಮತ್ತು ಮಹಿಳೆಯರಿಗಾಗಿ ನಡೆಸುವಲ್ಲಿ ಯಶಸ್ವಿಯಾದರು ಮಾತ್ರವಲ್ಲ ನಾಗಾ ಪ್ರಜಾಪ್ರಭುತ್ವ ಮಾದರಿ ಸಂಪ್ರದಾಯದ ಪ್ರತಿಯೊಬ್ಬ ನಾಗರಿಕನ ಅಭಿಪ್ರಾಯಗಳಿಗೆ ಮನ್ನಣೆ ದೊರಕಿಸಿಕೊಟ್ಟು ನಿರ್ಧಾರ ಕೈಗೊಳ್ಳುವಲ್ಲಿ ಅವರ ಪಾತ್ರವನ್ನು ಗಟ್ಟಿಗೊಳಿಸಿದರು. ಅನೇಕ ಸ್ಥಳಗಳಲ್ಲಿ ಅವರು ತಾವು ಕಲಿತದ್ದನ್ನು ಅನುಭವದ ಮೂಶಿಗೊಳಪಡಿಸಿದರು.

ನಾಗಾಲ್ಯಾಂಡ್‌ನ ನಾಗಾ ತಾಯಂದಿರ ಸಂಘ ತನ್ನ ಘೋಷಣೆಗೆ "ಮಾನವರ ಐಕ್ಯತೆ"ಯ ಮೂಲಕ ಸದಾ ಕಾರ್ಯನಿರತವಾಗಿದ್ದು ಸ್ತ್ರೀಯರ ವ್ಯಕ್ತಿತ್ವ, ಮಾನವೀಯ ಮೌಲ್ಯಗಳು ಮತ್ತು ಹಕ್ಕುಗಳು ಎತ್ತಿಹಿಡಿಯುವ ತನ್ನ ಧ್ಯೇಯಗಳ ಮೂಲಕ ನಾಗಾ ಮಹಿಳೆಯರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತದೆಯಲ್ಲದೇ ಆ ಮೂಲಕ ಇಡೀ ನಾಗಾ ಸಮುದಾಯದ ಒಳಿತಿಗಾಗಿ ಉನ್ನತಿಗಾಗಿ ಶ್ರಮಿಸುತ್ತಿದೆ. ಜೀವನದಲ್ಲಿ ಶಾಂತಿಯಿಂದ ಜೀವಿಸುವುದರಿಂದ ಮಾನವರ ಅಭಿವೃದ್ಧಿ ಸಾಧ್ಯ ಎಂಬುದನ್ನು ಸಾರಿ ಹೇಳುತ್ತದೆ. NMA ಶಾಂತಿಗಾಗಿ ಮತ್ತು ತೆರೆದ ಮನಸ್ಥಿತಿಗಾಗಿ ತಮ್ಮ ಘೋಷಣೆ "ಇನ್ನು ಕಣ್ಣೀರು ಸುರಿಸದಿರಿ" ಎಂಬುದನ್ನು ಎಲ್ಲ ನಾಗರಿಕ ಬಂಧುಗಳಿಗೆ ಒತ್ತಿ ಹೇಳುತ್ತ ಎಲ್ಲರನ್ನೂ ಶಾಂತಿ ಪ್ರಕ್ರಿಯೆಯಲ್ಲಿ ತೆರೆದ ಮನಸ್ಸಿನಿಂದ ಭಾಗವಹಿಸಲು ತಿಳಿಸುತ್ತದೆ.

ನಾಗಾಲ್ಯಾಂಡ್ ನಾಗಾ ತಾಯಂದಿರ ಸಂಘ ಮತ್ತು ಮಣಿಪುರದ ನಾಗಾ ಮಹಿಳೆಯರ ಯೂನಿಯನ್ ಎರಡೂ ಸೇರಿ ತಮ್ಮ ಅಭಿಪ್ರಾಯ ಹಾಗೂ ಆಲೋಚನೆಗಳನ್ನು ವ್ಯಕ್ತಪಡಿಸಲು ವಿವಿಧ ಗುಂಪುಗಳಿಗೆ ವೇದಿಕೆಯನ್ನು ನಿರ್ಮಿಸಿಕೊಟ್ಟಿವೆ.

ನಾಗಾ ಮಹಿಳಾ ಸಂಘಟನೆಗಳ ರಚನೆ (ನಾಗಾ ತಾಯಂದಿರ ಸಂಘ ಮತ್ತು ನಾಗಾ ಮಹಿಳೆಯರ ಯೂನಿಯನ್, ಮಣಿಪುರ) ಮೇಲೆ ತಿಳಿಸಿದಂತೆ ನಾಗಾ ಮಹಿಳೆಯರ ಯೂನಿಯನ್ ಮತ್ತು ನಾಗಾ ತಾಯಂದಿರ ಸಂಘಗಳು ಸದಸ್ಯರು ಸಮಾಜದ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿದ ಅನುಭವದಿಂದ ಮತ್ತು ಬುಡಮಟ್ಟದಿಂದಲೂ ಸಶಕ್ತತೆಯನ್ನು ಪಡೆದುಕೊಳ್ಳುತ್ತಾರೆ. ಉದಾಹರಣೆಗೆ NWUM 15ಬುಡಕಟ್ಟುಗಳನ್ನು ಮತ್ತು ಹೊ ಹೊ ವಿಭಾಗಗಳನ್ನು ಹೊಂದಿದೆ. ಆಯಾ ಬುಡಕಟ್ಟು ಜನಾಂಗಗಳನ್ನು ಪ್ರತಿನಿಧಿಸುವ ಮತ್ತು ಹೊಹೊ ತಮ್ಮ ಶಕ್ತಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಮನೋಸ್ಥೈರ್ಯವನ್ನು ಗ್ರಾಮ ಮಟ್ಟದಿಂದಲೇ ಕಲಿತಿರುತ್ತಾರೆ.

NWUM ತನ್ನ ಧ್ಯೇಯಗಳಿಗಾಗಿ ಪರಿಶ್ರಮದಿಂದ ಕಾರ್ಯ ನಿರ್ವಹಿಸುತ್ತಿದೆ. ಮಹಿಳಾ ಸಶಕ್ತತೆ, ಲಿಂಗಾಧಾರಿತ ಸಮಸ್ಯೆಗಳು, ಆಸ್ತಿಯ ಹಕ್ಕು ಮತ್ತು ಪ್ರಮುಖ ನಿರ್ಧಾರ ಕೈಗೊಳ್ಳುವಲ್ಲಿ ಮಹಿಳಾ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ, ಸಂವಿಧಾನಾತ್ಮಕ ಮತ್ತು ಸಾಂಪ್ರದಾಯಿಕ ಆಚರಣೆಗಳಲ್ಲಿ ಎಂತಹ ಕ್ಲಿಷ್ಟ ಸನ್ನಿವೇಶಗಳಲ್ಲಿ ನಾಗಾ ಮಹಿಳೆಯರು ಆತ್ಮ ಸ್ಥೈರ್ಯದಿಂದ ಪಾಲ್ಗೊಂಡು ಶಾಂತಿಯುತ ಹಾಗೂ ಗೌರವಯುತವಾದ ಪರಿಹಾರವನ್ನು ಬಯಸುತ್ತಿದ್ದಾರೆ ಮತ್ತು ಅದಕ್ಕಾಗಿ ಸಂಪೂರ್ಣ ಬೆಂಬಲ ನೀಡುತ್ತಿದ್ದಾರೆ. ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಶ್ರಮಿಸುತ್ತಿದ್ದಾರೆ. ನಾಗಾ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಪೂರ್ಣ ಪರಿಹಾರವನ್ನು ಎಲ್ಲ ನಿಟ್ಟಿನಲ್ಲಿಯೂ, ಎಲ್ಲ ದಾರಿಗಳ ಮೂಲಕವೂ ಮಾನವೀಯತೆಯ ಉಳಿವಿಗಾಗಿ ಹುಡುಕುತ್ತಿದ್ದಾರಲ್ಲದೇ ಅದಕ್ಕಾಗಿ ಒಮ್ಮನಸ್ಸಿನಿಂದ ಶ್ರಮಿಸುತ್ತಿದ್ದಾರೆ.

ಮೂಲ : ಡಾ|| ಗಿನಾ ಷಂಗ್‌ಕಾಮ್

ಕನ್ನಡಕ್ಕೆ : ಡಾ|| ವಸುಂಧರಾ ಭೂಪತಿ, ಬೆಂಗಳೂರು

ಹೆಣ್ಣು ಸಂತಾನಕ್ಕೆ ಕಾದಿರುವ ಕುತ್ತು

ನಾವು-ನೀವು ಹೆಣ್ಣಾಗಿದ್ದರೆ/ಹೆಣ್ಣಾಗಿದ್ದು ಒಂದು ಕ್ಷಣ ವಿಚಾರಿಸಿ ನೋಡೋಣ. ನಮ್ಮ ತಾಯಿ ಹೆಣ್ಣು ಕೂಸು ಬೇಡವೆಂದು ಗರ್ಭದಲ್ಲೇ ನಮ್ಮನ್ನು ಹೊಸಕಿ ಹಾಕಿದ್ದರೆ? ಈ ಪ್ರಶ್ನೆ ಎಂತವರ ಮನಸ್ಸನ್ನು ಗಲಿಬಿಲಿಗೊಳಿಸದೆ ಇರದು. ಆದರೆ ಆಗ ಇದು ಸಾಧ್ಯವಿದ್ದಿಲ್ಲ, ನಿಜ. ಆದರೆ ನಮ್ಮ ವೈಜ್ಞಾನಿಕ ಜಗತ್ತು ಶೋಧಿಸಿರುವ ಅಲ್ಟ್ರಾ ಸೋನೊಗ್ರಾಫಿ ಎಂಬ ಯಂತ್ರದ ಸಹಾಯದಿಂದ ಗರ್ಭದ ಲಿಂಗ ಪತ್ತೆ ಹಚ್ಚಿ ಹೆಣ್ಣಿದ್ದರೆ ಚಿವುಟಿ ಹಾಕುವ ಪಾಪದ ಕೆಲಸ ಕೆಲ ವರ್ಷಗಳಿಂದ ನಡೆಯುತ್ತಲೇ ಇದೆ. ಈ ಯಂತ್ರದ ಬಳಕೆ ನಂತರವೇ ಹೆಣ್ಣು ಸಂತಾನ ಕ್ಷೀಣಿಸಲು ಕಾರಣವಾಗಿದೆ ಎಂಬುದು ಇತ್ತೀಚಿನ ಜನಗಣತಿಯಿಂದ ದೃಢಪಟ್ಟಿದೆ.

ಬೆಳೆದು ನಿಂತಿರುವ ಪುರುಷ-ಮಹಿಳೆಯರ ಸಂಖ್ಯೆಯಲ್ಲಿ ವ್ಯತ್ಯಾಸ ಕಾಣದಿದ್ದರೂ, ಆರು ವರ್ಷದೊಳಗಿನ ಗಂಡು-ಹೆಣ್ಣು ಶಿಶುಗಳ ನಡುವಿನ ಅಂತರದಲ್ಲಿ, ಏರುಪೇರು ಆಗಿರುವುದು ಅಪಾಯಕಾರಿ ಬೆಳವಣಿಗೆ. ಇದು ಸರ್ಕಾರ ಮತ್ತು ವೈದ್ಯಕೀಯ ಕ್ಷೇತ್ರದ ಪರಿಣಿತರನ್ನು ಚಿಂತೆಗೀಡು ಮಾಡಿದೆ.

ಕರ್ನಾಟಕ ಸರ್ಕಾರ 1994ರಲ್ಲಿ ಕಾನೂನು ರಚಿಸಿ, ಭ್ರೂಣದ ಲಿಂಗ ಪತ್ತೆಯನ್ನು ನಿಷೇಧಿಸಿದೆ. ಇದು ಶಿಕ್ಷಾರ್ಹ ಅಪರಾಧ ವಾಗಿದ್ದರೂ ರಾಜ್ಯದ ಬಹುತೇಕ ಕ್ಲಿನಿಕ್‌ಗಳು ಇಂಥ ಯಂತ್ರವನ್ನು ರಾಜಾರೋಷವಾಗಿ ಬಳಸಿ ಹೆಣ್ಣು ಶಿಶುಗಳನ್ನು ಗರ್ಭಾವಸ್ಥೆ ಯಲ್ಲೇ ಹೊಸಕಿ ಹಾಕುವ ಪಾತಕದಲ್ಲಿ ತೊಡಗಿವೆ. 1991ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಗಂಡು-ಹೆಣ್ಣಿನ ಅನುಪಾತ ಕ್ರಮವಾಗಿ 1,000 : 960 ಇತ್ತು. ಇತ್ತೀಚಿನ ಜನಗಣತಿ - 2001ರಲ್ಲಿ 1000 ಪುರುಷರ ಸಂಖ್ಯೆಗೆ 964 ಮಹಿಳೆಯರಿದ್ದಾರೆ.

ನಿಜವಾದ ಸಮಸ್ಯೆ ಇರುವುದು 0-6 ವರ್ಷ ವಯೋಮಿತಿಯ ಮಕ್ಕಳಲ್ಲಿ. ಇಲ್ಲಿ ಗಂಡು ಮತ್ತು ಹೆಣ್ಣುಮಕ್ಕಳ ಸಂಖ್ಯೆ ನಡುವೆ ಅತೀ ದೊಡ್ಡ ಕಂದಕ ನಿರ್ಮಾಣವಾಗುತ್ತಿದೆ ಎಂಬುದು ಈ ವರ್ಷದ ಜನಗಣತಿಯಿಂದ ತಿಳಿದುಬಂದಿದೆ.

ಕೊನೆಗೂ ಸರ್ಕಾರ ಕಣ್ತೆರೆಯಿತು. ಭ್ರೂಣ ಹತ್ಯೆಗೆ ಮುಂದಾಗುವವರು ಶಿಕ್ಷೆ ಮತ್ತು ಜುಲ್ಮಾನೆಗೆ ಗುರಿ ಯಾಗುತ್ತಾರೆಂದು ಕರ್ನಾಟಕ ಗೆಜೆಟ್‌ನಲ್ಲಿ ಸ್ಪಷ್ಟವಾಗಿ ಸರ್ಕಾರ ನಮೂದಿಸಿತು. ಆದರೆ ಈ ಕಾನೂನನ್ನು ಪರಿಣಾಮಕಾರಿ ಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಗಂಭೀರವಾಗಿ ಆಲೋಚಿಸಲೇ ಇಲ್ಲ. ಇತ್ತೀಚಿನ ಜನಗಣತಿ ಸಮಯದಲ್ಲಿ ಪುರುಷ-ಮಹಿಳೆಯರ ಸಂಖ್ಯೆಯಲ್ಲಿ ಉಂಟಾಗಿರುವ ವ್ಯತ್ಯಾಸ ಸರ್ಕಾರದ ಕಣ್ತೆರೆಸಿದೆ.

ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಆರೋಗ್ಯ ಸಚಿವಾಲಯದ ನಿರ್ದೇಶಕರು, ಆಯುಕ್ತರು ಇತ್ತೀಚೆಗೆ ಬೆಂಗಳೂರಿನಲ್ಲಿ ಸಭೆ ಸೇರಿ ಭ್ರೂಣದ ಲಿಂಗ ಪತ್ತೆ ಮತ್ತು ಹತ್ಯೆ ತಡೆಯಲು ಆಯಾ ಜಿಲ್ಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳನ್ನು ಅಧಿಕೃತ ಪ್ರಾಧಿಕಾರಿ ಎಂದು ನೇಮಿಸಿ ಇಂಥ ಕಾನೂನುಬಾಹಿರ ದಂಧೆಯಲ್ಲಿ ತೊಡಗುವ ಕ್ಲಿನಿಕ್ ಅಥವಾ ಪ್ರಯೋಗಾಲಯಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಜೊತೆಗೆ ಭ್ರೂಣದ ಲಿಂಗ ಪತ್ತೆ ಹಚ್ಚುವ ಪ್ರಯೋಗಾಲಯಗಳು ಅಥವಾ ಅಲ್ಟ್ರಾ ಸೋನೊಗ್ರಾಫಿ ಹೊಂದಿರುವ ಕ್ಲಿನಿಕ್‌ಗಳು ಖಡ್ಡಾಯವಾಗಿ ಇಂತಹ ಅಧಿಕೃತ ಪ್ರಾಧಿಕಾರಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕೆಂದೂ ತಿಳಿಸಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಲ್ಲಿ ನೋಂದಾಯಿಸಿಕೊಂಡ ಕ್ಲಿನಿಕ್‌ಗಳು ನಂತರವೂ ಇಂಥ ಕಾರ್ಯ ಮುಂದುವರೆಸಿದ್ದು ಕಂಡುಬಂದರೆ ಮತ್ತು ಅದು ಸಾಬೀತಾದರೆ ಅವುಗಳ ನೋಂದಣಿ ರದ್ದುಪಡಿಸಲಾಗುವುದು.

ಅಲ್ಲದೇ ಇಂಥ ಕ್ಲಿನಿಕ್‌ಗಳು ಲಿಂಗ ಪತ್ತೆ ಮಾಡುತ್ತೇವೆಂದು ಪತ್ರಿಕೆಗಳಿಗೆ ಜಾಹೀರಾತು ನೀಡುವುದನ್ನು ನಿಷೇಧಿಸಲಾಗಿದೆ. ಈ ಕಾನೂನು ಉಲ್ಲಂಘನೆ ಮಾಡಿದಲ್ಲಿ 3 ವರ್ಷ ಜೈಲು ಶಿಕ್ಷೆ ಮತ್ತು 10,000 ರೂ.ಗಳವರೆಗೆ ದಂಡ ತೆರಬೇಕಾಗುತ್ತದೆ. ನಂತರವೂ ಇಂಥ ಕೆಲಸದಲ್ಲಿ ತೊಡಗಿದರೆ 5 ವರ್ಷ ಸೆರೆವಾಸ ಮತ್ತು 50,000 ರೂ. ವರೆಗೆ ದಂಡ ಕಕ್ಕಬೇಕಾಗುತ್ತದೆ.

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಳಿ

ಬರಿದಾದ ಬಾಳು

❑ ಪ್ರತಿಭಾ ಭಟ್ಟ, ನೀರ್ಗಾನ್

ಈಕೆ ಲಕ್ಷ್ಮಿ. ಒಂದು ಮಗುವಿನ ತಾಯಿಯಾಗಿರುವ 20 ವರ್ಷದ ವಿಧವೆ. ಇದು ಕಥೆಯಾದರೂ ಸತ್ಯ. ಇದು ನಡೆದದ್ದು ಒಂದು ಒಕ್ಕಲ ಕುಟುಂಬದಲ್ಲಿ. ಲಕ್ಷ್ಮಿಗೆ ಮದುವೆಯಾದದ್ದು 14ನೆಯ ವಯಸ್ಸಿನಲ್ಲಿ. ಶೇಖರ ಎಂಬ ಹೆಸರಿನ ಅವಳ ಗಂಡ ಸಕಲ ಚಟಗಳ ಸರದಾರ. ಅವನಿಗೆ ಮದುವೆಯಾಗುವಾಗ 22 ವರ್ಷ. 15ನೆಯ ವರ್ಷದಿಂದಲೂ ಕಂಠಪೂರ್ತಿ ಕುಡಿಯುವುದು ಅವನಿಗೆ ರೂಢಿಯಾಗಿತ್ತು. ತಂದೆ-ತಾಯಿ, ಇಬ್ಬರು ತಂಗಿಯರ ಕುಟುಂಬ. ತಂದೆಗೂ ಕುಡಿತದ ಚಟ ಅಂಟಿಕೊಂಡಿತ್ತು. ಅಪ್ಪ, ಮಗ ಒಬ್ಬರಿಗಿಂತ ಒಬ್ಬರು ಹೆಚ್ಚು ಕುಡಿಯುತ್ತಿದ್ದರು. ಕೂಲಿ ಕೆಲಸ ಮಾಡಿ ಬದುಕುತ್ತಿದ್ದ ಹಿಂದುಳಿದ ಕುಟುಂಬವದು. ಅಪರೂಪಕ್ಕೆ ಅಪ್ಪ, ಮಗ ಯಾರ ಮನೆಗಾದರೂ ಕೆಲಸಕ್ಕೆ ಹೋಗುತ್ತಿದ್ದರು. ಇದ್ದ ಸ್ವಲ್ಪ ಅಡಿಕೆ ತೋಟದ ಬೆಳೆಯಿಂದ ಬರುವ ಹಣ, ಕೂಲಿ ಮಾಡಿ ಸಂಪಾದಿಸಿದ ಹಣ ಕುಡಿಯಲು ಸಾಕಾಗುತ್ತಿರಲಿಲ್ಲ. ಹೆಣ್ಣುಮಕ್ಕಳು ಹೆಂಡತಿ-ದುಡಿದ ಕೆಲವು ಹಣವನ್ನೂ ಇವರು ದೋಚುತ್ತಿದ್ದರು. ತಾಯಿ, ತಾನು ಮತ್ತು ಹೆಣ್ಣುಮಕ್ಕಳು ದುಡಿದ ಹಣದಿಂದ ಹೇಗೋ ಮನೆ ನಡೆಸುತ್ತಿದ್ದಳು. ಇದೇ ರೀತಿ ಕಷ್ಟಪಟ್ಟು ಹೆಣ್ಣುಮಕ್ಕಳಿಗೆ ಸರಿಯಾದ ವಯಸ್ಸಿನಲ್ಲಿ ಮದುವೆ ಮಾಡಿದಳು. ಮಗನನ್ನು ಸರಿದಾರಿಗೆ ತರಲು ತುಂಬಾ ಪ್ರಯತ್ನಪಡುತ್ತಿದ್ದಳು. ಧರ್ಮಸ್ಥಳಕ್ಕೂ ಹೋಗಿ ಪ್ರಮಾಣ ಮಾಡಿಸಿಕೊಂಡು ಬಂದಳು. ಆದರೆ 'ನಾಯಿಬಾಲ ಡೊಂಕು' ಎಂಬಂತೇ ಅವನ ಸ್ವಭಾವ ವಿದ್ದಿತ್ತು. ಆದರೂ ತಾಯಿಗೆ 'ಮಗ ಇಂದಲ್ಲಾ ನಾಳೆ ಸುಧಾರಿಸಿಯಾನು' ಎಂಬ ದೂರದ ಆಸೆ.

ಶೇಖರನ ದುರ್ಗುಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೆ ಹೋದವು. ಹೆಂಡದಿಂದ ಹೆಣ್ಣುಗಳವರೆಗೂ ಅವನ ಕಣ್ಣು ಹರಿದಾಡಿತು. ಮಗನಿಗೆ ಮದುವೆ ಮಾಡಿದರೆ ಸರಿಹೋಗುತ್ತಾನೆ ಎಂದು ನಂಬಿದ ತಾಯಿ ಹೆಣ್ಣು ಹುಡುಕತೊಡಗಿದಳು. ಅವಳಿಗೆ ಲಕ್ಷ್ಮಿ ಮಗನಿಗೆ ಸರಿಜೋಡಿ ಅನ್ನಿಸಿತು. ಲಕ್ಷ್ಮಿಯ ತವರಲ್ಲಿ ತೀರಾ ಬಡತನ. ನಾಲ್ಕು ಜನ ಹೆಣ್ಣುಮಕ್ಕಳನ್ನು ಹೆತ್ತ ಲಕ್ಷ್ಮಿಯ ತಂದೆ ತಾಯಿಯರಿಗೆ ಒಬ್ಬಳದಾದರೂ ಮದುವೆಯಾಗಲಿ ಎಂಬ ಹಂಬಲ. ಶೇಖರನ ಬಗ್ಗೆ ಯಾರಲ್ಲೂ ವಿಚಾರಿಸದೇ ಮಗಳನ್ನು ಮದುವೆ ಮಾಡಿಕೊಟ್ಟರು. ಮದುವೆಯಾದ ಮೇಲೆ ಲಕ್ಷ್ಮಿ, ಅತ್ತೆಯ ಜೊತೆ ಕೆಲಸಕ್ಕೆ ಹೋಗತೊಡಗಿದಳು. ಕ್ರಮೇಣ ಶೇಖರನ ನಿಜರೂಪ ತಿಳಿದರೂ ಏನೂ ಮಾಡುವಂತಿರಲಿಲ್ಲ. ಸಹಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಈ ನಡುವೆ ಲಕ್ಷ್ಮಿ ಗರ್ಭಿಣಿಯಾದಳು. ಅವಳಿಗೆ ಅವಳಿ ಮಕ್ಕಳಾಗುತ್ತವೆ ಎಂದು ವೈದ್ಯರಿಂದ ತಿಳಿಯಿತು. ಅವಳ ಆರೋಗ್ಯ ಚೆನ್ನಾಗಿಲ್ಲದ್ದರಿಂದ ವಿಶ್ರಾಂತಿ ಅನಿವಾರ್ಯವಾಯಿತು. ಶೇಖರನ ತಾಯಿ ತನ್ನ ಕೈಲಾದಷ್ಟು ಆರೈಕೆ ಮಾಡುತ್ತಿದ್ದಳು. ದಿನ ತುಂಬಿ ಅವಳ ಮಕ್ಕಳು ಹುಟ್ಟಿದಾಗ, ಸಂತಸವಾದರೂ ಒಂದು ಮಗುವಿನ ಬಾಯಿ ಊನವಾಗಿತ್ತು. ಮತ್ತೊಂದು ಮಗು ತೀರ ದುರ್ಬಲವಾಗಿತ್ತು. ದುರ್ಬಲವಾದ ಮಗು ಒಂದು ವರ್ಷಕ್ಕೇ ತೀರಿಹೋಯಿತು. ಲಕ್ಷ್ಮಿಯ ಗಂಡ, ಮಾವ ಮನೆಯಲ್ಲಿ ನಡೆಯುತ್ತಿರುವುದು ನಮಗೆ ಸಂಬಂಧಿಸಿದ್ದಲ್ಲ ಎನ್ನುವಂತೇ ಇದ್ದರು. ಇದಾದ ಕೆಲವೇ ದಿನದಲ್ಲಿ ಶೇಖರನ ಆರೋಗ್ಯ ಹದಗೆಡತೊಡಗಿತ್ತು. ಶಿವಮೊಗ್ಗದ ಆಸ್ಪತ್ರೆಗೆ ಚಿಕಿತ್ಸೆಗೆ ಹೋದಾಗ ಅವನಿಗೆ 'ಲೈಂಗಿಕ ರೋಗ' ವಿದೆ ಎಂದು ತಿಳಿದುಬಂತು. ಇದು ಯಾವಾಗ ಯಾರಿಂದ ಬಂದಿತ್ತೋ ತಿಳಿಯದು. ಇದರಿಂದಲೇ ಮಕ್ಕಳೂ ದುರ್ಬಲರಾಗಿದ್ದು ತಿಳಿದು ಶೇಖರನ ತಾಯಿಗೆ ಆಘಾತ ವಾಯಿತು. ಆದರೆ ಪರಿಸ್ಥಿತಿ ಕೈಮೀರಿ ಹೋಗಿತ್ತು. ಹೀಗೇ ಸುಸ್ತು, ಸಂಕಟ ಎನ್ನುತ್ತ 5-6 ತಿಂಗಳು ಶೇಖರನ ಆಸ್ಪತ್ರೆ ಅಲೆದಾಟ ನಡೆಯಿತು. ಕೊನೆಗೊಮ್ಮೆ ಪಶ್ಚಾತ್ತಾಪ ಪಡುತ್ತ ಶೇಖರ ಸಾವಿನ ತೆಕ್ಕೆ ಸೇರಿದನು. ಲಕ್ಷ್ಮಿಯ ಗೋಳಾಟ ಹೇಳತೀರದು.

ಶೇಖರನ ತಾಯಿ ತಂದೆಗೆ ವಯಸ್ಸಾಗುತ್ತಿದೆ. ಅವರಿರುವುದು ಇನ್ನೆಷ್ಟು ದಿನವೋ? ಲಕ್ಷ್ಮಿಯ ತವರಿನವರು, ಲಕ್ಷ್ಮಿಯ ಜವಾಬ್ದಾರಿ ಹೊರಲು ಸಾಧ್ಯವಿಲ್ಲವೆನ್ನುತ್ತಿದ್ದಾರೆ. ವಿದ್ಯೆಯಿಲ್ಲದ, ಹಣವಿಲ್ಲದ, ಯೌವ್ವನವಿರುವ ಲಕ್ಷ್ಮಿ, ಒಂದು ಮಗುವನ್ನು ಕಟ್ಟಿಕೊಂಡು ಹೇಗೆ ತಾನೇ ಜೀವನ ನಡೆಸಿಯಾಳು? ಲಕ್ಷ್ಮಿಗೆ, ಮಗುವಿಗೆ, ಶೇಖರನಿಂದ 'ಲೈಂಗಿಕ ರೋಗ' ಹರಡಿರಬಹುದು. ಹರಡಿದೆ ಎಂದಾದರೆ ಅವಳ ಮುಂದಿನ ಜೀವನ ಅತ್ಯಂತ ಕಷ್ಟಕರವಲ್ಲವೇ?

ಶೇಖರನ ಪೂರ್ವಾಪರ ವಿಚಾರಿಸದೇ ಮಗಳನ್ನು ಮದುವೆ ಮಾಡಿ, ಕೈ ತೊಳೆದುಕೊಂಡಿದ್ದು ಲಕ್ಷ್ಮಿಯ ಹೆತ್ತವರ ತಪ್ಪಲ್ಲವೇ? ತನ್ನ ಮಗನ ದುರ್ಗುಣಗಳನ್ನು ತಿಳಿದೂ ಒಂದು ಹೆಣ್ಣನ್ನು ಸೊಸೆಯಾಗಿಸಿಕೊಂಡ, ಶೇಖರನ ತಾಯಿ ತಂದೆಯರದು ತಪ್ಪಲ್ಲವೇ? 20 ವರ್ಷಕ್ಕೇ ಯಾರದೋ ತಪ್ಪಿಗೆ ಇವಳ ಬಾಳು ಬರಿದಾಗಿದೆ. ಆ ಹೆಣ್ಣಿಗಾದ ಅನ್ಯಾಯವನ್ನು ಸರಿಪಡಿಸಲು ಸಾಧ್ಯವೇ? •

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067